ಶ್ರೀ ರಾಮಕೃಷ್ಣ ಹೆಗಡೆ.—ಕಾಂಗ್ರೆಸ್‌ನವರು ಉತ್ತರ ಪ್ರದೇಶದಿಂದ ಕೆ.ಕೆ. ಬಿರ್ಲಾರವರನ್ನು ಆರಿಸಿಕೊಂಡರಲ್ಲ, ಅವರಿಗಿಂತ ಒಳ್ಳೆಯ ಅನುಭವ, ಒಳ್ಳೆಯ ನಡತೆ ಇದ್ದಂತಹವರು ಇವರು.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಶ್ರೀಮಾನ್ ರಮೇಶ್ ಕುಮಾರ್‌ರವರದ್ದು ಬಹಳ ಜಾಸ್ತಿಯಾಯಿತು.

(ಗೊಂದಲ)

ಶ್ರೀ ರಮೇಶ್‌ಕುಮಾರ್.—ತಾವು ಜೀರ್‌ಮಲಾನಿ ಅವರ ಬಗ್ಗೆ ಹೇಳಿದ್ದುದು.

(ಗೊಂದಲ)

ಶ್ರೀಮತಿ ನಾಗರತ್ನಮ್ಮ.—ಅಧ್ಯಕ್ಷರೆ, ಅವರು ಕೂಗಾಡಿದರೆ ನನಗೆ ಅಷ್ಟರವಟ್ಟಿಗೆ ಕೂಗಾಡಲಿಕ್ಕೆ ಆಗುವುದಿಲ್ಲ, ನನಗೆ ಅಷ್ಟು ದೊಡ್ಡ ಗಂಟಲು ಇಲ್ಲ. ಆದರೆ ಅವರು *** ಎಂದು ಹೇಳಿದರೆ, ಅದನ್ನು ತಾವು ಒಪ್ಪಿಕೊಳ್ಳುತ್ತೀರಾ ?

(ಗೊಂದಲ)

ಅಧ್ಯಕ್ಷರು —ನೀವು ರಾಜೀನಾಮೆ ಬಗ್ಗೆ ಹೇಳುತ್ತೀರಿ.

(ಗೊಂದಲ)

ಶ್ರೀಮತಿ ನಾಗರತ್ನಮ್ಮ.—ಅಧ್ಯಕ್ಷರೆ,

ಅಧ್ಯಕ್ಷರು.—ಅವರು ಅಂದಿಲ್ಲ ಎಂದು ಹೇಳುತ್ತಾರೆ ಆಕಸ್ಮಾತ್ ಅಂದಿದ್ದರೆ ಅದನ್ನು ತೆಗೆದು ಹಾಕುತ್ತೇನೆ.

ಶ್ರೀಮತಿ ನಾಗರತ್ನಮ್ಮ.—ಪ್ರೈಮಿನಿಸ್ಟರ್ ಹೆಂಡತಿಗೆ ಅವರು ಹೇಳಿರುವುದು ಅವರೇ ಇರಬೇಕು. ***

(ಗೊಂದಲ)

ಅಧ್ಯಕ್ಷರು.—ದಯಮಾಡಿ ಮಾನ್ಯ ಸದಸ್ಯರೆಲ್ಲರೂ ಕುಳಿತುಕೊಳ್ಳಬೇಕು, ಈಗ ಜಿ. ಎಸ್. ದೊಡ್ಡಮೇಟಿಯವರು ಭಾಷಣವನ್ನು ಪ್ರಾರಂಭ ಮಾಡಬೇಕು.

ವಿತ್ತೀಯ ಕಾರ್ಯಕಲಾಪಗಳು,

೧೯೮೮–೮೯ನೇ ಸಾಲಿನ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ.

† ಶ್ರೀ ಜಿ. ಎಸ್. ದೊಡ್ಡಮೇಟ (ರೋಣ).—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳಾದಂಥ ರಾಮಕೃಷ್ಣ ಹೆಗಡೆಯವರು ಅರ್ಥ ಮಂತ್ರಿಗಳಾಗಿರುವುದರಿಂದ, ಇವರು ಮಂಡಿಸಿದಂಥ ಆಯವ್ಯಯ ಪತ್ರವನ್ನು ಸ್ವಾಗತಿಸುತ್ತಾ ಕೆಲವು ಮಾತುಗಳನ್ನು ಹೇಳ ಬಯಸುತ್ತೇನೆ. ಈ ಒಂದು ಆಯವ್ಯಯ ಪತ್ರದಲ್ಲಿ ಹೆಚ್ಚಾಗಿ ಕೇಂದ್ರ ಸರ್ಕಾರದ ಪ್ರಸ್ತಾಪ ಬಂದಿದೆ ಎನ್ನುವ ಮಾತನ್ನು ನಮ್ಮ ಪ್ರತಿಪಕ್ಷದವರು ಮೇಲಿಂದ ಮೇಲೆ ಆಪಾದನೆಯನ್ನು ಮಾಡುತ್ತಿದ್ದಾರೆ. ಆದರೆ ವಸ್ತು ಸ್ಥಿತಿ ಅದು ನಿಜವಾಗಿಯೇ ಇದೆ, ಇಲ್ಲ ಎಂದು ಅಲ್ಲ, ಮಾನ್ಯ ಅರ್ಥ ಮಂತ್ರಿಗಳು ಬಿಚ್ಚು ನುಡಿಯಿಂದ ಎಲ್ಲವನ್ನೂ ಹೇಳಿದ್ದಾರೆ. ಕೇಂದ್ರದಿಂದ ಬರಬೇಕಾದ ನಮಗೆ ಆದಾಯ ಸರಿಯಾಗಿ ಬಂದಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಈ ಒಂದು ಆರ್ಥಿಕ ಸ್ವಾಯತ್ತತೆ ಏನು ಇದೆಯಲ್ಲ ಇದರ ಬದಲಾಗಿ ಕೇಂದ್ರೀಕೃತ ಆರ್ಥಿಕ ನೀತಿ ರಾಜ್ಯಗಳ ಆರ್ಥಿಕ ಶೋಷಣೆಯನ್ನು ಮಾಡುತ್ತಿದೆ ಎನ್ನುವ ಮಾತನ್ನು ಅಂಕಿಅಂಶಗಳ ಆಧಾರವಾಗಿ ಹೇಳಿದ್ದಾರೆ. ಇದು ಕೇಂದ್ರ ಹಾಗೂ ರಾಜ್ಯಗಳ ನಡುವಿನ ಘರ್ಷಣೆ ಅಲ್ಲ. ರಾಜ್ಯಕ್ಕೆ ದೊರೆಯಬೇಕಾದ ಪಾಲನ್ನು ಕೇಳಿದರೆ ತಪ್ಪು ಇಲ್ಲ. ಒಂದು ರೀತಿಯಲ್ಲಿ ಜಿ. ಪಿ. ರಾಜರತ್ನಂ

---

* ಅಧ್ಯಕ್ಷರ ಆದೇಶದ ಮೇರೆಗೆ ತೆಗೆದು ಹಾಕಲಾಗಿದೆ.

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಅವರು ಹೇಳಿರುವಂಥ ಮಾತು ನೆನಪಿಗೆ ಬರುತ್ತಿದೆ ಅಂದರೆ ಅವರು ಒಂದು ಕವಿತೆಯಲ್ಲಿ ಏನು ಹೇಳಿದ್ದಾರೆ ಅಂದರೆ...

ದುಡಿಯೋನ್ ನೀನು! ಪಡೆಯೋನ್ ಔನು!
ಬೋನ ನಿನಗಾದ್ರೆ ಔನ್ಗೆ ಗೌನು!
ದುಡ್ಡೀ ದುಡ್ಡೀ ದುಡ್ಡೀನ ಬೆಟ್ಟ
ನಿನ ದುಡ್ನಲ್ಲೆ ತಕ್ಕೊಂತ ಒಂದು ಕಾಸ್
ನಿಂಗ್ ಔನ್ ಎಸದ್ರೆ ಸೈರ್ಸು!

ಹೀಗಿ ಜಿ. ಪಿ. ರಾಜರತ್ನಂ ಅವರು ನಾಡಿನ ಬಡವನ ಬಗ್ಗೆ ಹೇಳಿದ್ದಾರೆ. ರಾಜ್ಯ ಸರ್ಕಾರಗಳು ಸರ್ಕಸ್ಸಿನ ಸಿಂಹ ಅಲ್ಲ. ಕೇಂದ್ರ ಸರ್ಕಸ್ಸ್ ರಿಂಗ್ ಮಾಸ್ಟರ್ ರೀತಿಯಲ್ಲಿ ವರ್ತಿಸಬಾರದು. ಸರ್ಕಸ್ಸಿನ ಸಿಂಹ ಕಾಡ ಸಿಂಹವಾಗಿ ಅಲೆದಾಡಿದರೆ ಪರಿಸ್ಥಿತಿ ಹೇಗೆ ಆದೀತು ಎನ್ನುವುದನ್ನು ಕೂಡ ನಾವು ಗಮನದಲ್ಲಿಟ್ಟು ಕೊಳ್ಳಬೇಕು. ಪ್ರತಿಯೊಂದು ಮಾತನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಹಣ ದುಂಬ್ಬರವನ್ನು ಕೂಡ ಹೇಳಿದ್ದಾರೆ ಅಷ್ಟೇ ಅಲ್ಲ, ಆಯವ್ಯಯ ಪತ್ರದ ಮಂಡನೆಗಿಂತಲೂ ಮೊದಲು ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿ ಹೇಗೆ ಇತ್ತು ಎನ್ನುವುದನ್ನೂ ಕೂಡ ನಿಚ್ಚಳವಾಗಿ ಹೇಳಿದ್ದಾರೆ. ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ನೆರವನ್ನು ಯಾವರೀತಿ ಕೊಟ್ಟಿದ್ದಾರೆಂದು ಪುಸ್ತಕದ ಮೂಲದ ತಿಳಿಸಿದ್ದಾರೆ. ಕೇಂದ್ರದಿಂದ ಬರಬೇಕಾದ ಪಾಲು ಎಲ್ಲಿ ಸೋರಿ ಹೋಗುತ್ತಿದೆ ಎನ್ನುವುದನ್ನು ಕೂಡ ಹೇಳಿದ್ದಾರೆ. ಒಂದು ಕಡೆ ೬೧೫ ಕೋಟಿ ರೂಪಾಯಿ ಒಟ್ಟು ನಿವ್ವಳ ತೆರಿಗೆ ಆದಾಯದ ಪೈಕಿ ಕೇಂದ್ರಕ ಪಾಲು ೫೮೭ ಕೋಟಿ ರೂಪಾಯಿ ಮತ್ತು ಒಟ್ಟಿಗೆ ಎಲ್ಲಾ ರಾಜ್ಯಗಳದು ಸೇರಿ ದೊರೆಯುವ ಅತ್ಯಲ್ಪ ಮೊಬಲಗು ಅಂದರೆ ೨೮ ಕೋಟಿ ರೂಪಾಯಿಗಳು ರಾಜ್ಯಗಳಿಗೆ ಬರುವ ಆದಾಯ ತೆರಿಗೆ ಪಾಲು ೪೪ ಕೋಟಿ ರೂಪಾಯಿಯಷ್ಟು ಕಡಿಮೆಯಾಗುವ ಅಂಶವನ್ನು ನಮ್ಮೆಲ್ಲರ ಗಮನಕ್ಕೆ ತೆಗೆದುಕೊಂಡು ಬಂದಿದ್ದಾರೆ.

ಮಾನ್ಯ ಅಧ್ಯಕ್ಷರೆ, ಇಲ್ಲಿ ಒಂದು ಮಾತನ್ನು ನಿಜವಾಗಿ ಹೇಳುವುದಾದರೆ, ನಮ್ಮ ೧ ರೂಪಾಯಿಯ ಬೆಲೆ ಎಷ್ಟಕ್ಕೆ ಇಳಿದಿದೆ ಎಂಬುದನ್ನು ನಾವು ನೋಡಬೇಕಾಗಿದೆ. ನಮ್ಮ ಒಂದು ರೂಪಾಯಿಯ ಬೆಲೆ ಇವತ್ತು ೧೫ ಪೈಸೆಗೆ ಇಳಿದಿದೆ.....

ಅಧ್ಯಕ್ಷರು.— ನೀವು ಮುಗಿಸಿ ಬೇಗ. ಲಾಸ್ಟ್ ಸೆಂಟಿನ್ಸ್‌ನ್ನು ಹೇಳಿ.

ಶ್ರೀ ಜ್ಞಾನದೇವ ಎಸ್. ದೊಡ್ಡಮನೆ.— ಇನ್ನು ಒಂದೇ ಒಂದು ವಾಕ್ಯವನ್ನು ಹೇಳುತ್ತೇನೆ. ನಮ್ಮ ಯೋಜನೆ ಮತ್ತು ಯೋಜನೇತರ ಖರ್ಚಿನಲ್ಲಿ ಶೇಕಡಾವಾರು ಹೆಚ್ಚಳವಾಗಿದೆ ಎಂಬುದು ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ನಮಗೆ ಕಂಡುಬಂದಿದೆ. ಮತ್ತು ನಮ್ಮ ರಾಜ್ಯದ ಬಜೆಟ್‌ನಲ್ಲಿಯೂ ಕೂಡ ಕಂಡುಬಂದಿದೆ. ಯೋಜನೇತರ ವೆಚ್ಚವನ್ನು ಯಾವ ರೀತಿ ಕಡಿಮೆ ಮಾಡಬೇಕೆಂದು ನಾವು ಚಿಂತನೆ ಮಾಡಬೇಕಾಗಿದೆ.

ಅಧ್ಯಕ್ಷರು.—ತಾವು ಮುಕ್ತಾಯ ಮಾಡಿ.

ಅಧ್ಯಕ್ಷರು.—ಮಾನ್ಯ ಕಾನಡೆಯವರೇ, ಇದುವರೆಗೆ ಯಾರೂ ಹೇಳದೇ ಇರತಕ್ಕ ವಿಚಾರವನ್ನು ಹೇಳಬೇಕು. ಮುತ್ತಿನಂಥ ಮಾತನ್ನು ಹೇಳಬೇಕು,

† ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಅಧ್ಯಕ್ಷರೇ, ಈ ಸಲದ ಬಜೆಟ್‌ನಲ್ಲಿ ಇಲಿಯನ್ನು ಹಿಡಿಯುವುದಕ್ಕೆ ೭ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಅದೇರೀತಿ ಹುಲಿಯನ್ನು ಹೊಡೆಯುವುದಕ್ಕೆ ಎಷ್ಟು ಹಣವನ್ನು ಕೊಟ್ಟಿದ್ದಾರೆ ಎಂಬುದನ್ನು ಹೇಳಬೇಕು ?

ಇನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಗೆ ಎಷ್ಟು ಕಾರ್ಖಾನೆಗಳಿಂದ ಹಣ ಬರಬೇಕಾಗಿದೆ ಎಂಬುದನ್ನು ನಾನು ಕೇಳಿದಾಗ ಮಾನ್ಯ ಜೆ. ಹೆಚ್. ಪಟೇಲ್‌ರವರೇ ನನಗೆ ಉತ್ತರವನ್ನು ಕೊಟ್ಟಿರತಕ್ಕದ್ದು ಇದೆ. ೧೦ ಲಕ್ಷಕ್ಕಿಂತ ಮೇಲ್ಪಟ್ಟು ಬರಬೇಕಾದ ಕಾರ್ಖಾನೆಗಳಿಂದ ೧೪೯ ಕೋಟಿ ರೂಪಾಯಿ ಇದೆಯೆಂದು ಅವರು ಹೇಳಿದ್ದಾರೆ. ಅಂದಮೇಲೆ ಇನ್ನು ರಾಜ್ಯದಲ್ಲಿರತಕ್ಕ ಸಣ್ಣಸಣ್ಣ ಕಾರ್ಖಾನೆಗಳಿಂದ ಬರಬೇಕಾದ ಹಣ ಎಷ್ಟು ಎಂಬುದನ್ನು ಹೇಳಬೇಕು. ಮನೆಬಳಕೆ ವಿದ್ಯುಚ್ಛಕ್ತಿಯ ಬಗ್ಗೆ ೫–೧೦ ರೂಪಾಯಿಗಳನ್ನು ಮಂಡಲಿಗೆ ತುಂಬಲಿಲ್ಲವೆಂದು ಅವರಿಗೆ ಕೊಟ್ಟಿದ್ದ ವಿದ್ಯುಚ್ಛಕ್ತಿಯನ್ನು ಸರಬರಾಜನ್ನು

ನಿಲ್ಲಿಸಿ ಅವರ ಮನೆಗೆ ಹಾಕಿದ್ದ ದೀಪವನ್ನು ಈ ಜನತಾ ಸರ್ಕಾರ ಆರಿಸಿದ್ದಾರೆ. ನಾನು ಕೇಳಿದ ಪ್ರಶ್ನೆಯೊಂದಕ್ಕೆ ಮಾನ್ಯ ಸಚಿವರೇ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಕೋಟ್ಯಾಂತರ ರೂಪಾಯಿ ಕರ್ನಾಟಕ ವಿದ್ಯುಚ್ಛಕ್ತಿ ಪಂಡಲಿಗೆ ದೊಡ್ಡದೊಡ್ಡ ಕಾರ್ಖಾನೆಗಳಿಂದ ಏನು ಹಣ ಬರಬೇಕಾಗಿದೆ ಅದನ್ನೆಲ್ಲಾ ಇವರು ಏತಕ್ಕೆ ವಸೂಲ್ಮಾಡಿಲ್ಲವೆಂದು ನಾನು ಕೇಳಬಯಸುತ್ತೇನೆ. ಅವರ ಹೆಸರನ್ನು ಹೇಳಲಿಚ್ಛಿಸುವುದಕ್ಕೂ ಮಾನ್ಯ ಜೆ. ಹೆಚ್. ಪಟೇಲ್‌ರವರು ಹೆದರುತ್ತಿದ್ದಾರೆಂದರೆ ಇದು ನನಗೆ ಆಶ್ಚರ್ಯವಾಗುತ್ತದೆ.

ಇನ್ನು ಎಕ್ಸೈಸ್ ಬಗ್ಗೆ ಹೇಳುವುದಾದರೆ ೧೯೮೨ ಇಸವಿಯಲ್ಲಿ ಸರ್ಕಾರಕ್ಕೆ ೩೫ ಕೋಟಿ ರೂಪಾಯಿಗಳು ಬರಬೇಕಾಗಿತ್ತು. ಅದರಲ್ಲಿ ಇದುವರೆಗೆ ಎಷ್ಟು ಹಣವನ್ನು ವಸೂಲ್ಮಾಡ್ದಿದೀರಿ ಎಂಬುದನ್ನು ಹೇಳಬೇಕಂ. ಆಟೋ ರಿಕ್ಷಾದವರು ಪೆಟ್ರೋಲ್ ಜೊತೆ ಸೀಮೆ ಎಣ್ಣೆಯನ್ನು ಹಾಕಿ ಓಡಿಸುವುದರಿಂದ ಜನರ ಆರೋಗ್ಯ ಕೆಡುತ್ತದೆಂದು ಅವರ ಮೇಲೆ ಕೇಸನ್ನು ಹಾಕಿದ್ದೀರಿ. ಆದರೆ ಈ ಕರ್ನಾಟಕದಲ್ಲಿ ೧ ಲೀಟರ್ ಸೇಂದಿಗೆ ೫೦೦ ಲೀಟರ್ ನೀರನ್ನು ಸೇರಿಸಿ ಅದಕ್ಕೆ ಮಧ್ಯದ ವಸ್ತುಗಳನ್ನು ಬೆರೆಯಿಸಿ ಜನರ ಆರೋಗ್ಯವನ್ನು ಹಾಳುಮಾಡುತ್ತಿರುವ ಎಕ್ಸೈಸ್ ಕಂಟ್ರ್ಯಾಕ್ಟರ್‌ಗಳ ಮೇಲಾಗಲಿ, ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳ ಮೇಲಾಗಲಿ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ? ಎಷ್ಟು ಕೇಸುಗಳನ್ನು ಹಾಕಿದ್ದೀರಿ ? ಅವರನ್ನು ಏನಾದರೂ ಅರೆಸ್ಟ್ ಮಾಡಿದ್ದೀರಾ ಎಂಬುದನ್ನು ನಾನು ಕೇಳಬಯಸುತ್ತೇನೆ. ಪಾಪ, ಆ ಆಟೋರಿಕ್ಷಾದವರು ಬೆಳಗಿನಿಂದ ಸಂಜೆಯವರೆಗೆ ದುಡಿದರೆ ೧೦ ರೂಪಾಯಿ ಸಿಕ್ಕುತ್ತದೆ. ಅವರು ಸೀಮೆ ಎಣ್ಣೆಯನ್ನು ಮಿಕ್ಸ್ ಮಾಡಿದರು ಎಂದು ಅವರ ಮೇಲೆ ಈ ರೀತಿಯ ಕೇಸುಗಳನ್ನು ಹಾಕಿ ತೊಂದರೆ ಕೊಡುತ್ತಿದ್ದೀರಿ. ಆದರೆ ಅದೇ ಕೋಟ್ಯಾಂತರ ರೂಪಾಯಿ ತೆರಿಗೆಗಳನ್ನು ಈ ಸರ್ಕಾರಕ್ಕೆ ಕೊಡಬೇಕಾಗಿರತಕ್ಕ ಕಂಟ್ರ್ಯಾಕ್ಟರ್‌ಗಳನ್ನು ಎಷ್ಟು ಜನರನ್ನು ಒಡಿದಿದ್ದೀರಿ ? ಎಷ್ಟು ಕೇಸುಗಳನ್ನು ಹಾಕಿದ್ದೀರೆಂಬುದನ್ನು ತಾವು ಇಲ್ಲಿ ಹೇಳುತ್ತಿಲ್ಲ.

ಇನ್ನು ಜಾತಿಯ ಸುಳ್ಳು ಸರ್ಟಿಫಿಕೇಟ್‌ಗಳನ್ನು ಪಡೆದುಕೊಂಡು ಕೆಲಸಕ್ಕೆ ಸೇರಿರತಕ್ಕ ಸಾವಿರಾರು ಕೇಸುಗಳಿದ್ದರೂ ಕೂಡ ಯಾರನ್ನೂ ನೀವು ಡಿಸ್‌ಮಿಸ್ ಮಾಡಿಲ್ಲ. ಇದೇರೀತಿ ಹರಿಜನ ಮೇಲೆ ದೌರ್ಜನ್ಯಗಳಾಗಿರತಕ್ಕ ಪ್ರಕರಣಗಳು ಹಲವಾರು ಇವೆ. ಅವುಗಳ ಬಗ್ಗೆ ಕೂಡ ಸರ್ಕಾರ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತಿಲ್ಲ.

ಸ್ವಾಮಿ, ಲೋಕಾಯುಕ್ತ ಇರತಕ್ಕದ್ದು ಯಾರಿಗೋಸ್ಕರ ? ಇದನ್ನು ನೀವು ಯಾರಿಗೋಸ್ಕರ ಮಾಡಿದ್ದೀರಿ ? ೧೯೮೫ರಲ್ಲಿ ವರಾಹಿ ಪ್ರಕರಣದಲ್ಲಿ ನಾನು ಒಂದು ಕೇಸನ್ನು ಹಾಕಿದಾಗ ಲೋಕಾಯುಕ್ತರು ತನಿಖೆ ಮಾಡಿದ್ದಾರೆ. ಆದರೂ ಇದನ್ನು ಉಪ ಲೋಕಾಯುಕ್ತಕ್ಕೆ ಸಾಕುತ್ತೇವೆಂದು ಹೇಳಿದ್ದಾರೆ. ಸ್ವಾಮಿ, ತನಿಖೆಯಾಗಿರುವ ೬೬ ಮಂದಿ ಅಧಿಕಾರಿಗಳ ಪೈಕಿ ಮಂತ್ರಿಗಳ ಸಂಬಂಧೀಕರು ಎಷ್ಟು ಜನರಿದ್ದಾರೆ ? ಅವರಿಂದ ಎಷ್ಟು ಹಣ ಬರಬೇಕು ಎಂಬುದು ತಮಗೇನಾದರೂ ಗೊತ್ತಿದೆಯೆ? ಮೊನ್ನಂಗಾರಿಕೆ ಇಲಾಖೆಯಲ್ಲಿ ಯಾರೋ ಒಬ್ಬ ಗೋಪಾಲ್ ಎನ್ನುವವರು ೨ ರೂಪಾಯಿ ದುಡ್ಡನ್ನು ತಿಂದು ಬಿಟ್ಟ ಎಂದು ಅವನನ್ನು ಡಿಸ್‌ಮಿಸ್ ಮಾಡಿದಿರಿ. ಆದರೆ ಕೋಟ್ಯಾಂತರ ರೂಪಾಯಿ ಅವ್ಯವಹಾರವನ್ನು ಮಾಡಿದ ಅಧಿಕಾರಿಗಳಿಗೆ ನೀವು ರಕ್ಷಣೆಯನ್ನು ಏತಕ್ಕೆ ಕೊಟ್ಟಿದ್ದೀರಿ ಎನ್ನುವ ಬಗ್ಗೆ ನನಗೆ ಉತ್ತರವನ್ನು ಕೊಡಬೇಕು.

ಇನ್ನು ಈ ಬಜೆಟ್‌ನಲ್ಲಿ ಹರಿಜನರ ಅಭಿವೃದ್ಧಿಯ ಬಗ್ಗೆ ಏನೇನೂ ಯೋಜನೆಗಳನ್ನು ಕೊಟ್ಟಿಲ್ಲ. ನಮ್ಮಲ್ಲಿ ೧೦ ಕೊಳವೆ ಬಾವಿಗಳಿದ್ದರೆ ಅವುಗಳ ಪೈಕಿ ಒಂದರಲ್ಲಿ ನೀರು ಬರುತ್ತದೆ. ಇನ್ನುಳಿದವುಗಳಲ್ಲಿ ನೀರೇ ಇಲ್ಲ. ನಾವು ಒಂದು ಸಲವಲ್ಲ ಅನೇಕ ಸಲ ಇದರ ಬಗ್ಗೆ ಆಪಾದನೆ ಮಾಡಿದ್ದೇವೆ. ಮಾನ್ಯ ನಜೀರ್ ಸಾಬ್‌ರವರು ಕುಡಿಯಂಪ ನೀರಿನ ಸಲುವಾಗಿ ಕೊಳವೀ ಬಾವಿಗಳನ್ನು ತೆಗೆಸಿದಮೇಲೆ ಶೇ೦–೨೦ ವೂಟ್ ಕೆಳಕ್ಕೆ ಹೋಗಲಿಲ್ಲ. ಕೊಳವೆಗಳನ್ನು ಆಳ ಮಾಡಿಸಿರುವುದರಲ್ಲಿ ನೀರು ಬಂದಿಲ್ಲ. ಇದರಲ್ಲಿ ಬೇಕಾದಷ್ಟು ಹಣವನ್ನು ಹೊಡೆದಿರಬಹುದೆಂದು ಮಾನ್ಯ ಸಚಿವರ ಗಮನಕ್ಕೆ ತಂದಿರುತ್ತೇವೆ. ನಮ್ಮ ಸಿದ್ದಾಪುರ ತಾಲ್ಲೂಕಿನಲ್ಲಿ ಒಂದೊಂದು ಬಾವಿಗೆ ಸುಮಾರು ೨೦ ಸಾವಿರ ರೂಪಾಯಿಗಳವರೆಗೆ ಖರ್ಚು ಮಾಡಿದ್ದಾರೆ. ಇದರಿಂದ ಬಡವರಿಗೆ ಅನುಕೂಲವಾಗುತ್ತಿಲ್ಲ ಶ್ರೀಮಂತರಿಗೆ ಅನುಕೂಲವಾಗುತ್ತಿದೆ. ಹರಿಜನರಿಗಾಗಿ ೧೮ ಪರ್ಸೆಂಟ್ ವಿಶೇಷ ಉದ್ಯೋಗವನ್ನು ಕಲ್ಪಿಸುವುದಾಗಿ ಇರುತ್ತದೆ ಈ ವಿಶೇಷ ಜಾತಿಯನ್ನು ಮೊಟಕುಗೊಳಿಸುತ್ತಿರುವುದರಿಂದ ಹರಿಜನಗಿರಿಜನರಿಗೆ ಉದ್ಯೋಗಾವಕಾಶದಲ್ಲಿ

ಕೊಂದರೆಯಾಗುತ್ತಿದೆ. ಹರಿಜನರಿಗೆ ಕುಡಿಯುವ ನೀರಿನ ಸಲುವಾಗಿ ಗಂಗಾಕಲ್ಯಾಣವೆಂಬ ಯೋಜನೆಯನ್ನು ತೆಗೆದುಕೊಳ್ಳಲಾಯಿತು. ನಮ್ಮ ಊರಿಗೆ ಇದರಿಂದ ಗಂಗಾ ಕಲ್ಯಾಣವಾಗಿದಿಯೇ ಎಂದು ನೋಡಿದರೆ ಒಂದು ಗಂಗಾ ಕಲ್ಯಾಣವಾಗಿಲ್ಲ. ಹರಿಜನರ ಬಗ್ಗೆ ಬಹಳವಾಗಿ ಘೋಷಣೆಗಳನ್ನು ಮಾತ್ರ ಸರ್ಕಾರದವರು ಹೇಳಿಕೊಂಡು ಬೋರ್ಡ್‌ಗಳನ್ನು ಹಾಕಿಕೊಂಡಿರುತ್ತಾರೆ. ಹರಿಜನರಿಗೆ ಯಾವ ವಿಧವಾದ ಸಪೋರ್ಟ್ ಕೊಡುತ್ತಿಲ್ಲ. ಬರೀ ಶ್ರೀಮಂತರಿಗೆ, ದಫ್ತಾಕೋರರಿಗೆ ಕಂಟ್ರಾಕ್ಟ್‌ದಾರರಿಗೆ ಮಾತ್ರ ರಕ್ಷಣೆ ಸಿಗುತ್ತಿದೆ. ಸಾಮಾನ್ಯ ಜನರು, ತಟ್ಟೊರಿಕ್ಷಾ ಓಡಿಸತಕ್ಕಂಥವರಿಗೆ ಇವರು ಕಿರುಕಂಳ ಕೊಡುತ್ತಿದ್ದಾರೆ. ನಮ್ಮ ಕಾರವಾರದಲ್ಲಿ ಪೋಲೀಸರಿಗೆ ಟ್ರೈನಿಂಗ್ ಕೊಡತಕ್ಕಂಥ ಒಂದು ಪೋಲೀಸ್ ಟ್ರೈನಿಂಗ್ ಸೆಂಟರ್ ಇದೆ. ಆ ಟ್ರೈನಿಂಗ್ ಸೆಂಟರ್‌ನಲ್ಲಿ ಕೈ ಕಾಲು ಇಲ್ಲದ ಒಬ್ಬ ಸಬ್ ಇನ್‌ಸ್ಪೆಕ್ಟರ್ ಟ್ರೈನಿಂಗ್ ಕೊಡುತ್ತಿರುತ್ತಾರೆ. ಇವರು ದರೋಡೆಕೋರರನ್ನು ಯಾವರೀತಿ ಹಿಡಿಯುವ ಟ್ರೈನಿಂಗ್ ಕೊಡಲು ಸಾಧ್ಯವಾಗುತ್ತದೆ ? ಇದಕ್ಕಾಗಿ ಒಂದು ವರ್ಷಕ್ಕೆ ೯೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದುದು ಈಗ ಮೂರು ಲಕ್ಷ ರೂಪಾಯಿಗಳಿಗೆ ಈ ಖರ್ಚು ಏರಿದೆ.

ಇನ್ನು ಲೋಕಾಯುಕ್ತವೆಂದು ಹೆಸರು ಹೇಳುತ್ತಾರೆ. ಇದರಲ್ಲೂ ಕೂಡ ಬಡವರಿಗೆ ರಕ್ಷಣೆ ಸಿಗುತ್ತಿಲ್ಲ. ಶ್ರೀಮಂತರಿಗೆ, ಪಣವಿದ್ದವರಿಗೆ ಮಾತ್ರ ರಕ್ಷಣೆ ಸಿಗುತ್ತಿದೆ. ಅತಿ ಮುಖ್ಯವಾಗಿ ಬಡವರ ರಕ್ಷಣೆಗೆ ಬಾರದ ಯಾವ ಅಧಿಕಾರಿಯೇ ಇರಲಿ ಅಂಥ ಅಧಿಕಾರಿಯನ್ನು ಸಸ್‌ಪೆಂಡ್ ಮಾಡಬೇಕೆಂದು, ಅವರಿಗೆ ಯಾವ ವಿಧವಾದ ಬೆಂಬಲವನ್ನು ಕೊಡಬಾರದೆಂದು ತನಿಖೆ ಮಾಡಬೇಕೆಂದು ಹೇಳಿದಾಗ ಆಂಥವರ ಬಗ್ಗೆ ಕಟ್ಟುನಿಟ್ಟಾದ ಕ್ರಮ ತೆಗೆದುಕೊಳ್ಳುವುದಾಗಿ ಮಾನ್ಯ ಸಚಿವರಾದ ಬೊಮ್ಮಾಯಿಯವರು ಮಾನ್ಯ ಸಚಿವರಾದ ಜೆ.ಹೆಚ್. ಪಟೀಲ್‌ರವರು ಮಾನ್ಯ ಸಚಿವರಾದ ಅರಣ್ಯ ಮಂತ್ರಿಗಳು ಉತ್ತರವನ್ನು ಕೊಟ್ಟರು. ಅವರೆಲ್ಲರಿಗೂ ಶಿಕ್ಷೆಯನ್ನು ಕೊಡಲು ಲೋಕಾಯುಕ್ತರಲ್ಲಿ ಅವರ ಸಂಬಂಧಿಕರೇ ಇದ್ದಾರೆ. ಬಡವರಿಗೆ ಕೂಲಿಕಾರರಿಗೆ ಈ ಬಜೆಟ್ ವಿರೋಧವಾದ ಬಜೆಟ್ ಎಂದು ಹೇಳದೆ ಬೇರೆ ಮಾರ್ಗವಿಲ್ಲ ವೆಂದು ಹೇಳಿ ಈ ಬಜೆಟ್‌ನ್ನು ವಿರೋಧಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಲ್. ಉಸ್ತಾದ್(ಬಿಜಾಪುರ).— ಸನ್ಮಾನ್ಯ ಅಧ್ಯಕ್ಷರೇ ಸನ್ಮಾನ್ಯ ಸದಸ್ಯರು, ಆಯವ್ಯಯ ಪತ್ರವನ್ನು ಕುರಿತು ಅನೇಕ ವಿವರಗಳನ್ನು ಈಗಾಗಲೇ ಕೊಟ್ಟಿದ್ದಾರೆ. ನಾನು ೧೯೮೯–೯೯ನೇ ಸಾಲಿನ ಈ ಬಜೆಟ್‌ನ್ನು ವಿರೋಧಿಸಿ ಒಂದೆರಡು ಮಾತುಗಳನ್ನು ಹೇಳಿವುದಕ್ಕೆ ಇಚ್ಛಿಸುತ್ತೇನೆ. ತಮ್ಮ ಬಜೆಟ್ ಭಾಷಣದಲ್ಲಿ ಮಾನ್ಯ ಮಂತ್ರಿಗಳು Government has fulfilled most of its electoral promises ಎಂದು ಹೇಳುತ್ತಾರೆ. ಅಧ್ಯಕ್ಷರೇ ಈ ವಿಷಯದಲ್ಲಿ ನಾನು ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅದೇನೆಂದರೆ ೧೯೮೫ನೇ ಇಸವಿಯಲ್ಲಿ ತಮ್ಮ ಪ್ರಣಾಳಿಕೆಯಲ್ಲಿ ನಮಗೆ ಒಂದು ಕೆಲಸ ಕೊಡುತ್ತೇವೆಂದು ಹೇಳಿದ್ದು ಅದರಂತೆ ಎಲ್ಲಿ ಆಯಿತು, ೧೯೮೫ರಲ್ಲಿ ಸರ್ಕಾರಿ ನೌಕರರನ್ನು ಕನಿಷ್ಠ ೧೧ ಸಾವಿರ ಮಂದಿಯನ್ನು ತುಂಬ ಬೇಕಾಗಿತ್ತು. ಮತ್ತೆ ಈಗ ಸದ್ಯಕ್ಕೆ ಳಿಗೆ ಸಾವಿರಕ್ಕಿಂತಲೂ ಹೆಚ್ಚು ಜನ ಸರ್ಕಾರಿ ನೌಕರರನ್ನು ತುಂಬ ಬೇಕಾಗಿದೆ. ಮನೆಗೆ ಒಬ್ಬರಿಗೆ ಕೆಲಸ ಕೊಡತಕ್ಕಂಥದ್ದು ಹಾಗೆಯೇ ಉಳಿದಿದೆ. ಪೊನ್ನಪ್ಪ ಇವರ ಆಡಳಿತ ೫ ವರ್ಷ ತುಂಬಿದ್ದಕ್ಕೆ ಜನೋತ್ಸವವನ್ನು ಸರ್ಕಾರದವರು ಆಚರಿಸಿದರು. ನವಲ್ಲಿ ಈ ಪದ್ಧತಿ ಬಂದಿದೆಯೇ? ಇವತ್ತು ಇರತಕ್ಕಂಥ ಮಂತ್ರಿಮಂಡಲದ ಗಾತ್ರವನ್ನು ನಿಜಕ್ಕೂ ಒಂದು ಏರ್‌ಬಸ್ ಎಂದು ಹೇಳಿದ್ದಾರೆ. ಜಿಲ್ಲಾ ಪರಿಷತ್ ಅಧ್ಯಕ್ಷರು ೨೦ಜನ, ಉಪಾಧ್ಯಕ್ಷರು ೨೦ಜನ, ಮತ್ತು ಮಂತ್ರಿಮಂಡಲ ೪೫ಜನ ಒಟ್ಟು ೭೫ ಜನರು ಏನು ಇದ್ದಾರೆ ದಯವಿಟ್ಟು ಇವರ ಪ್ರವಾಸ ಭತ್ಯ ಮತ್ತು ಮಂತ್ರಿಮಂಡಲದವರು ಫಾರಿನ್ ಟೂರ್ ಮಾಡಿರುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ವಿವರಣೆಯನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

೧೦–೩೦ ಎ. ಎಂ,

ಮಾನ್ಯ ಮುಖ್ಯಮಂತ್ರಿಯವರು ರಾಜ್ಯದ ರಾಜಕೀಯ ಬಿಟ್ಟು ಬೇರೆ ರಾಜ್ಯಕ್ಕೆ ಹೋದುದು ಒಟ್ಟು ಎಷ್ಟು ದಿನಗಳು ಎಂದು ವಿವರಣೆ ಕೊಡಬೇಕು. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿ ಆಸ್ತಿತ್ವಕ್ಕೆ ಬಂದನಂತರ ಸಾರ್ವಜನಿಕರ ತೊಂದರೆಗಳನ್ನು ಯಾವ ಪ್ರಕಾರ ಇವರು ಬಗೆಹರಿಸಿದ್ದಾರೆ ಅಥವಾ ಇಲ್ಲ ಎಂಬುವನ್ನು ಈ ಸದನಕ್ಕೆ ತಿಳಿಯುವುದಕ್ಕೆ ಶಾಸಕರ ಸಮಿತಿಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಂಡಲ ಪಂಚಾಯಿತಿಗಳಿಗೆ ಕೊಟ್ಟಿರುವ ೫೦ ಸಾವಿರ

ರೂಪಾಯಿಗಳು, ಧಾನ್ಯಗಳು, ಕೂಲಿ ಕೊಟ್ಟದ್ದು ಇವೆಲ್ಲ ಸೇರಿ ಲಕ್ಷಾಂತರ ರೂಪಾಯಿಗಳ ದುರ್ವ್ಯವಹಾರ ನಡೆದಿದೆ. ಇದರ ಬಗ್ಗೆ ತನಿಖೆ ಆಗಬೇಕು. ಮಾನ್ಯ ಮುಖ್ಯಮಂತ್ರಿಗಳ ಕಛೇರಿಯ ಆದೇಶದ ಪ್ರಕಾರ ಮಂತ್ರಿ ಮಂಡಲದಲ್ಲಿ ಆಪ್ತ ಕಾರ್ಯದರ್ಶಿಗಳು ಅವರ ಜಾತಿಯವರು ಇರಬಾರದೆಂದು ಇದೆ. ಆದರೂ ಇದ್ದಾರೆಂದು ತಿಳಿದು ಬಂದಿದೆ. ಆದ್ದರಿಂದ ಮಂತ್ರಿಮಂಡಲದಲ್ಲಿ ಮಂತ್ರಿಯವರ ಆಪ್ತ ಕಾರ್ಯದರ್ಶಿಗಳು ಎಷ್ಟು ಮಂದಿ ಅವರ ಜಾತಿಯವರು ಇದ್ದಾರೆ? ೫ ವರ್ಷದ ನಂತರ ಒಬ್ಬರೇ ಆಪ್ತ ಕಾರ್ಯದರ್ಶಿಯಾಗಿ ಇರಬಾರದೆಂದು ಇದೆ. ೫ ವರ್ಷ ಮೀರಿ ಎಷ್ಟು ಮಂದಿ ಇದ್ದಾರೆಂದು ತಿಳಿಸಬೇಕು. ರಾಜ್ಯ ಮಟ್ಟದಲ್ಲಿ ನೇಮಕಗೊಂಡಕನ್ನಡ ಕಾವಲು ಸಮಿತಿ, ಸರೋಜಿನಿ ಮಹಿಷಿ ಸಮಿತಿ, ರೈತರ ತೊಂದರೆಗಳನ್ನು ಅಧ್ಯಯನ ಮಾಡಲು ನೇಮಿಸಿದ ಸಮಿತಿ ಡ್ರೈ ಲ್ಯಾಂಡ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್, ಮೈನಾರಿಟಿ ಕಾರ್ಪೊರೇಷನ್, ಹಿಂದುಳಿದ ಸಮಾಜದ ಅಭಿವೃದ್ಧಿ ಕಾರ್ಪೊರೇರೇಷನ್ ಇವುಗಳ ಹಿನ್ನೆಲೆಯಲ್ಲಿ ಸರ್ಕಾರ ಮಾಡಿರುವ ಖರ್ಚು ಮತ್ತು ಸಮಿತಿಗಳಿಂದ ನೀಡಿರುವ ವರದಿಗಳ ಬಗ್ಗೆ ಮಾಹಿತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಆಯವ್ಯಯದಲ್ಲಿ ಮಾನ್ಯ ಮಾಡಿರುವ ಸುಂಕದಿಂದ ಸಾಮಾನ್ಯ ಕುಟುಂಬದವರಿಗೆ, ಬಡವರಿಗೆ ಏನೂ ಲಾಭವಿಲ್ಲ ಟೆಲಿಫೋನ್, ಗಡಿಯಾರ, ವಿದ್ಯುತ್ ಉಪಕರಣಗಳು ಇವುಗಳಿಗೆ ತೆರಿಗೆಯನ್ನು ಕಡಿಮೆ ಮಾಡಿದ್ದೀರಿ, ಆದ್ದರಿಂದ ಇದು ಕಡುಬಡವರಿಗೆ, ಸಾಮಾನ್ಯ ಜನರ ಸಲುವಾಗಿ ಮಂಡಿಸಿದ ಬಜೆಟ್ ಅಲ್ಲವೆಂದು ಭಾವಿಸುತ್ತೇನೆ. ರಾಜ್ಯ ಇವತ್ತಿನ ದಿವಸ ೩೭೫ ಕೋಟಿ ರೂಪಾಯಿ ಬೋಜಾ ಬಜೆಟ್ ಅನ್ನು ಮಂಡಿಸಿರುವಾಗ ಮುಖ್ಯ ಮಂತ್ರಿಗಳಿಗೆ ಏಕೆ ಟ್ಯಾಕ್ಸ್ ಹಾಕುವುದಕ್ಕೆ ಧೈರ್ಯ ಬರಲಿಲ್ಲವೆಂದು ಕೇಳುತ್ತೇನೆ. ಬಡವರಿಗಾಗಿ ಇರುವ ಜನತಾ ಮನೆ, ಓಲ್ಡ್ ಏಜ್ ಪೆನ್‌ಷನ್, ಅಂಗವಿಕಲರ ಪುನಾರ್ವಸತಿ, ವಿಧವಾ ವೇತನ ಇವುಗಳನ್ನು ಪ್ರತಿ ತಿಂಗಳು ವಿತರಣೆ ಮಾಡಿದ ವಿವರಗಳನ್ನು ಕೊಡಬೇಕೆಂದು ಒತ್ತಾಯಿಸುತ್ತೇನೆ. ತಾಳಿಭಾಗ್ಯ ಹೋಯಿತು. ಜಿಲ್ಲಾ ಪರಿಷತ್ತು ಗಿಲ್ಲಾ ಪರಿಷತ್ತು ಆಯಿತು. ಮಂಡಲ ಪಂಚಾಯಿತಿ ಗಿಂಡಲ ಪಂಚಾಯಿತಿ ಆಯಿತು. ಈಗ ಸದ್ಯಕ್ಕೆ ನೀರಿನ ಸಾಹೇಬರು ಒಬ್ಬರು ಇದ್ದಾರೆ.

ಅಧ್ಯಕ್ಷರು.— ತಾವು ಸಾಕು, ಮುಂಗಿಸಿ.

ಶ್ರೀ ಆರ್. ಎನ್. ನಾಯಕ್.— ಒಬ್ಬೊಬ್ಬರಿಗೆ ಎಷ್ಟೆಷ್ಟು ನಿಮಿಷ ಅವಕಾಶ ಕೊಡುತ್ತಿದ್ದೀರಿ. ಎಷ್ಟೆಷ್ಟು ನಿಮಿಷ ಮಾತನಾಡಬೇಕು? ಏನು ಕತೆ?

ಅಧ್ಯಕ್ಷರು.— ಕಥೆಯೂ ಇಲ್ಲ, ಪುರಾಣವೂ ಇಲ್ಲ.

ಶ್ರೀ ಆರ್.ಎನ್. ನಾಯಕ್.— ಕಥೆ, ಪುರಾಣ ಎನ್ನುವುದಕ್ಕೆ ಇದೇನು ಮಹಾಭಾರತವೆ?

ಅಧ್ಯಕ್ಷರು.— ನೀವು ಕುಳಿತುಕೊಳ್ಳಿ ಉಸ್ತಾದ್‌ರವರೆ, ನಿಮ್ಮದು ೫ ನಿಮಿಷ ಆಯಿತು. ಮುಂದೆ ಕೋಳಿವಾಡ ಅವರು.

ಶ್ರೀ ಎಂ. ಎಲ್ ಉಸ್ತಾದ್.— ೧೯೮೬ರಲ್ಲಿ ಜಿಲ್ಲಾ ಪರಿಷತ್ತು ಆಗುವುದಕ್ಕೆ ಮುಂಚೆ ಮಾನ್ಯ ಮುಖ್ಯಮಂತ್ರಿಗಳು ಬಿಜಾಪುರಕ್ಕೆ ಹೆಲಿಕ್ಯಾಪ್ಟರ್‌ನಲ್ಲಿ ಬಂದು...

ಶ್ರೀ ಆರ್. ಎನ್. ನಾಯಕ್.— ತಾವು ದಯವಿಟ್ಟು ಇಷ್ಟೇ ನಿಮಿಷದಲ್ಲಿ ಮುಗಿಸಬೇಕೆಂದರೆ ಹೇಗೆ ಪೂರ್ಣವನ್ನು ಬರೆಯಿಸಿ ಕೊಡಿ, ಮಾರ್ಗದರ್ಶನ ಮಾಡಿ.

ಅಧ್ಯಕ್ಷರು.— ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ. ಎಲ್ ಉಸ್ತಾದ್.— ೮-೧೨-೧೯೮೬ ರಂದು ಮುಖ್ಯ ಮಂತ್ರಿಗಳು ನಮ್ಮ ಜಿಲ್ಲೆಗೆ ಬಂದು ಮುಳವಾಡ ಲಿಫ್ಟ್ ಇರಿಗೇಷನ್ ಸ್ಕೀಂಗೆ ಅಡಿಗಲ್ಲು ಹಾಕಿ ಹೋದರು. ಆ ಇರಿಗೇಷನ್ ಸ್ಕೀಂ ಆದರೆ ಪೂರ್ಣವಾದರೆ ಲಕ್ಷ ಎಕರೆ ಜಮೀನು ನೀರಾವರಿ ಆಗುತ್ತದೆ. ಆದರೆ ಹೆಚ್ಚು ಕಡಿಮೆ ೫೦೦ ಕೋಟಿ ರೂಪಾಯಿಗಳು ಆ ಕಲ್ಲು ಆಗಿಯೇ ಉಳಿದಿದೆಯೇ ಹೊರತು ಇವತ್ತಿನವರೆಗೂ ಯಾವುದೇ ಕೆಲಸ ಆಗಿಲ್ಲ.

ಅಧ್ಯಕ್ಷರು.— ಮಾನ್ಯ ಕೋಳೀವಾಡ ಅವರಿಲ್ಲ. ಮಾನ್ಯ ಲಕ್ಕಪ್ಪನವರೇ, ನೀವು ಮಾತನಾಡಿ.

ಶ್ರೀ ಎಂ. ಎಲ್ ಉಸ್ತಾದ್ — ಯಾವಾಗ ಮುಖ್ಯಮಂತ್ರಿಗಳೇ ಸುಳ್ಳು ಹೇಳಲಿಕ್ಕೆ ಹತ್ತಿದ್ದಾರೆ ಆ ಈ ಸರ್ಕಾರದಲ್ಲಿ ಬೊಬ್ಬೆ ಹೊಡೆಯದಿದ್ದರೆ ಪ್ರಯೋಜನ ಇಲ್ಲ ಎಂದು ನಾನು ಬೊಬ್ಬೆ ಕೂಡ

ಹಾಕಿದ್ದೆ. ಕುಡಿಯುವ ನೀರಿನ ಯೋಜನೆ ಈ ಸರ್ಕಾರದಲ್ಲಿ ಪೆಂಡಿಂಗ್ ಇರುವುದು ಕಾರ್ಯಗತ ಆಗಿಲ್ಲ. ಅದು ಕಾರ್ಯಗತ ಆಗದಿದ್ದರೆ ಬಿಜಾಪುರ ಜನರು ಉಗ್ರವಾದ ಚಳುವಳಿ ಮಾಡುತ್ತಾರೆಂದು ಹೇಳಿ ತಾವು ಐದು ನಿಮಿಷ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ ಲಕ್ಕಪ್ಪ.— (ಚಿಕ್ಕನಾಯ್ಕನಹಳ್ಳಿ) ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಮಂಡಿಸಿರತಕ್ಕ ಆಯವ್ಯಯ ಪತ್ರವನ್ನು ವಿರೋಧಿಸಿ ನನ್ನ ವಕ್ತವ್ಯವನ್ನು ಪ್ರಾರಂಭ ಮಾಡುತ್ತೇನೆ. ಅಧ್ಯಕ್ಷರೆ, ೧೯೮೮-೮೯ ನೇ ಸಾಲಿನ ಈ ಆಯವ್ಯಯ ಪತ್ರವನ್ನು ನೋಡಿದರೆ ೩೮೭.೭೮ ಕೋಟಿ ರೂಪಾಯಿ ಖೋತಾ ಇದೆ. ಇದನ್ನು ತುಂಬಕ್ಕೆ ತೆರಿಗೆಗಳು ಏನಾದರೂ ಇದೆಯೇ ಎಂದರೆ ಅದೂ ಇಲ್ಲ. ಅಲ್ಲಿಗೆ. ಕೊರತೆ ಇದೆ, ತೆರಿಗೆ ಇಲ್ಲ ಎಂದರೆ ಈ ಬಜೆಟ್‌ನಿಂದ ಯಾವುದೇ ಅಭಿವೃದ್ಧಿಯೂ ಕೂಡ ಇಲ್ಲ ಎಂಬುದನ್ನು ತೋರಿಸತಕ್ಕ ಆಯವ್ಯಯ ಪತ್ರ ಇದು. ಆಯವ್ಯಯ ಪತ್ರದಲ್ಲಿ ಹೇಳಿರತಕ್ಕ ಕೆಲಸಕಾರ್ಯಗಳು ಎಷ್ಟರ ಮಟ್ಟಿಗೆ ಕಾರ್ಯಗತವಾಗಬಹುದೆಂಬ ಬಗ್ಗೆ ಅನುಮಾನ ಇದೆ. ಏಕೆಂದರೆ ೧೯೮೬-೮೭ ರಲ್ಲಿ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಅನೇಕ ಕಾಮಗಾರಿಗಳನ್ನು ಸೇರಿಸಲಾಗಿತ್ತು, ನಾಲ್ಕು ಕೆರೆಗಳ ಕಾಮಗಾರಿಗಳನ್ನು ಸೇರಿಸಿ ಇವುಗಳನ್ನು ಕಾರ್ಯಗಳ ಮಾಡುತ್ತೇವೆ ಎಂದು ಹೇಳಿದ್ದರು. ಆದರೆ ಇದುವರೆಗೆ ಆ ಬಗ್ಗೆ ಪೂರ್ಣವಾದ ವರದಿ ಆಗಲೀ, ಪ್ಲಾನ್ ಮತ್ತು ಎಸ್ಟಿಮೇಟ್ ಆಗಲೀ ಮಾಡಿಸುವುದಕ್ಕೆ ಸಾಧ್ಯ ಆಗಲಿಲ್ಲ. ಅಂದರೆ ಜನರು ಏನು ತಿಳಿದುಕೊಂಡರು ? ೧೯೮೬-೮೭ನೇ ಇಸವಿಯಲ್ಲಿ ಚಿಕ್ಕನಾಯ್ಕನ ಹಳ್ಳಿ ತಾಲ್ಲೂಕಿನಲ್ಲಿ ನಾಲ್ಕು ಕೆರೆಗಳನ್ನು ಕಟ್ಟತಕ್ಕ ಕೆಲಸ ಈ ಸರ್ಕಾರ ಮಾಡಿದೆ ಎಂದು ಜನಂ ತಿಳಿದು ಕೊಂಡಿದ್ದರು. ಆದರೆ ಕೆಲಸ ಮಾತ್ರ ಆಗಲಿಲ್ಲ. ಇದೇರೀತಿ ಈ ಕಾಮಗಾರಿಗಳನ್ನೂ ಸಹ ಬಜೆಟ್ ನಲ್ಲಿ ತೋರಿಸಿ ಬಜೆಟ್ ಬಹಳ ಚೆನ್ನಾಗಿದೆ ಎಂದು ಜನರಿಂದ ಮೆಚ್ಚುಗೆ ಪಡೆಯತಕ್ಕ ಕೆಲಸ ಆಗಿವೆಯೇ ವಿನಹ ಕೆಲಸ ಕಾರ್ಯಗತ ಮಾಡಿ ಎಷ್ಟು ಅಭಿವೃದ್ಧಿ ಕಾರ್ಯ ಆಗಿದೆ ಎಂಬುದನ್ನು ತೋರಿಸತಕ್ಕ ಚಿತ್ರ ಈ ಸರ್ಕಾರದಲ್ಲಿ ಇಲ್ಲವಾಗಿದೆ. ಆ ಚಿತ್ರ ಈ ಬಜೆಟ್‌ನಲ್ಲಿ ಇಲ್ಲ. ಆದ್ದರಿಂದ ಇದೊಂದು ನಷ್ಟಂಸಕ ಬಜೆಟ್, ಯಾವುದೇ ಫಲವನ್ನು ಜನತೆಗೆ ಕೊಡುವುದರಲ್ಲಿ ವಿಫಲವಾಗಿದೆ ಎಂದು ಹೇಳಬೇಕಾಗಿದೆ. ಪುರಸಭೆಗಳಲ್ಲಿ ಆಕ್ಟ್ರಾಯಿ ವಸೂಲಿ ಮಾಡುತ್ತಿಲ್ಲ. ಅಭಿವೃದ್ಧಿ ಗ್ರಾಂಟನ್ನು ಸರ್ಕಾರ ಕೊಡಬೇಕು. ಆದರಿಂದ ಅಭಿವೃದ್ಧಿ ಕಾರ್ಯಗಳು ನಡೆಯಬೇಕು. ಮೂರು ವರ್ಷಗಳಿಂದ ಇಡೀ ರಾಜ್ಯದಲ್ಲಿ ಪುರ ಸಭೆಗಳಿಗೆ ಅಭಿವೃದ್ಧಿ ಗ್ರಾಂಟನ್ನು ಕೊಟ್ಟಿಲ್ಲ ಎಂಬುದು ಕಂಡುಬಂದಿದೆ. ನನ್ನ ಕ್ಷೇತ್ರದಲ್ಲಿರುವ ಚಿಕ್ಕನಾಯ್ಕನಹಳ್ಳಿ ಪುರಸಭೆಗೆ ಮೂರು ವರ್ಷಗಳಿಂದ ಅಭಿವೃದ್ಧಿ ಗ್ರಾಂಟ್ ಕೊಟ್ಟಿಲ್ಲ. ಆಕ್ಟ್ರಾಯಿ ಕೂಡ ಇಲ್ಲದೆ ಕೊಡಬೇಕಾದ ಗ್ರಾಂಟ್ ಕೂಡ ಸಕಾಲದಲ್ಲಿ ಕೊಡದೇಹೋದರೆ ಅವುಗಳ ಗತಿ ಏನು ? ಅಲ್ಲಿನ ಚರಂಡಿ ವ್ಯವಸ್ಥೆ ಏನು ? ಎಸ್ಟಾಬ್ಲಿಷ್‌ಮೆಂಟ್ ವ್ಯವಸ್ಥೆ ಏನು ? ಯಾವರೀತಿಯಲ್ಲಿ ಅವರು ನೈರ್ಮಲ್ಯವನ್ನು ಪಟ್ಟಣಗಳಲ್ಲಿ ಕಾಪಾಡುವುದಕ್ಕೆ ಸಾಧ್ಯ ? ಎಷ್ಟು ತೊಂದರೆಗೆ ಗುರಿಯಾಗಿದೆ ಎಂಬುದನ್ನು ತಾವು ಮನಗಾಣಬೇಕು. ಈ ರಾಜ್ಯದಲ್ಲಿ ಹೆಚ್ಚು ಆದಾಯ ಬರತಕ್ಕ ಎಕ್ಸೈಜ್ ಇಲಾಖೆ ಇದೆ. ಲಕ್ಷಾಂತರ ಎಕರೆ ಭೂಮಿ ಆ ಇಲಾಖೆಗೆ ಒಳಪಟ್ಟಿದೆ. ಅಲ್ಲಿರತಕ್ಕ ಭೂಮಿಯನ್ನು ರೈತರು ಹಂಗಾಮಿ ಸಾಗುವಳಿಗೆ ಒಳಪಡಿಸಿ ೧೦, ೧೫, ೨೦, ೩೦ ವರ್ಷಗಳಿಂದ ಭೂಮಿಯನ್ನು ತಮ್ಮ ಸ್ವಾಧೀನದಲ್ಲಿಟ್ಟುಕೊಂಡು ತೆಂಗು ಮೊದಲಾದ ಬೆಳೆಗಳನ್ನು ಮಾಡಿ ಆದನ್ನು ಅಭಿವೃದ್ಧಿಪಡಿಸಿ ಅವರು ಅನುಭವಿಸುತ್ತಿದ್ದಾರೆ. ಆದರೆ ಒಂದು ಇಲಾಖೆ ಇದ್ದು, ಸಿಬ್ಬಂದಿ ಇದ್ದು, ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡುವುದಕ್ಕೆ ನಿಯಮಗಳಿದ್ದು ಅಂಥ ಭೂಮಿ ಎಷ್ಟಿದೆ ಎಂದರೆ ಇಲಾಖೆಯಲ್ಲಿ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ಎಕ್ಸೈಜ್ ಇಲಾಖೆಯಲ್ಲಿ ನಿವೇಗೆ ಸೇರಿರತಕ್ಕ ಭೂಮಿ ಎಷ್ಟಿದೆ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ಆ ಭೂಮಿಯಲ್ಲಿ ಎಷ್ಟನ್ನು ರೈತರು ಎನ್‌ಕ್ರೋಚ್ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಆ ಭೂಮಿಯನ್ನು ತಮ್ಮ ಸ್ವಾಧೀನದಲ್ಲಿ ೩೦ ವರ್ಷಗಳಿಂದ ರೈತರು ಅನುಭವಿಸುತ್ತಿದ್ದರೆ ಇಲಾಖೆಯಲ್ಲಿ ಈ ಭೂಮಿಯ ಮೇಲಿನ ಹಕ್ಕು ಏನು ಉಳಿದಿದೆ ?

ಅದಕ್ಕಾಗಿ ಈ ಭೂಮಿಯನ್ನು ಆ ಇಲಾಖೆಯಿಂದ ಬಿಡುಗಡೆ ಮಾಡಿ, ಯಾವ ರೈತರು ಸಾಕಷ್ಟು ವರ್ಷಗಳಿಂದ ಆದರ ಅಭಿವೃದ್ಧಿಗಾಗಿ ಲಕ್ಷಾ ತರ ರೂಪಾಯಿಗಳನ್ನು ವಿಚರ್ಚ ಮಾಡಿದ್ದಾರೋ ಆದರಿಂದ ಲಕ್ಷಾಂತರ ರೂಪಾಯಿಗಳನ್ನು ಸಂಪಾದನೆ ಮಾಡುತ್ತಿದ್ದಾರೋ ಮತ್ತು ಅವರ ಜೀವನಕ್ಕೆ, ಆಧಾರವಾಗಿರತಕ್ಕ ಈ ಭೂಮಿಯನ್ನು ಬಿಡುಗಡೆ ಮಾಡಿ ಆ ರೈತರಿಗೆ ಅದನ್ನು ಹಂಚಬೇಕೆಂಬುದು ನ

ನನ್ನ ಅಭಿಪ್ರಾಯ. ಏಕೆಂದರೆ ಮೊದಲು ಈ ಜನರೇಷನ್ ಸ್ಕೀಂ ಎಂದು ಬಂದು ಇತ್ತು. ಎಲ್ಲೆಲ್ಲಿ ಎಕ್ಸೆಸ್ ಭೂಮಿಯಲ್ಲಿ ಈಚಲ ಗಿಡಗಳು ಇಲ್ಲವೋ ಅಂತಹ ಕಡೆಗಳಲ್ಲಿ ಈ ಜನರೇಷನ್ ಸ್ಕೀಂನಲ್ಲಿ ಸಸಿಗಳನ್ನು ಹಾಕಿ ಅದನ್ನು ಬೆಳೆಸಿ ಈ ರಾಜ್ಯದಲ್ಲಿ ಒಳ್ಳೆಯ ಶುದ್ಧವಾದ ಹೆಂಡವನ್ನು ಜನರಿಗೆ ಕೊಡಿಸಬೇಕೆಂಬ ಉದ್ದೇಶ ಇತ್ತು. ಆ ಒಂದು ಸ್ಕೀಮಿನಲ್ಲಿ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡಿದಾಯಿತು. ಆದರಿಂದ ಪ್ರಯೋಜನವಾಗದೆ ಕೊನೆಗೆ ಆ ಸ್ಕೀಮನ್ನೆ ತೆಗೆದು ಹಾಕಲಾಯಿತು. ಆ ಭೂಮಿಯನ್ನು ಬಿಡುಗಡೆ ಮಾಡತಕ್ಕಂಥದ್ದು ಒಳ್ಳೆಯದೆಂಬುದು ನನ್ನ ಅಭಿಪ್ರಾಯ.

ಇನ್ನು ಭಾಗ್ಯ ಜೋತಿ ಯೋಜನೆಯ ಬಗ್ಗೆ ಹೇಳುವುದಾದರೆ, ಯಾರು ಕಡು ಬಡವರು ಇದ್ದಾರೋ ಅಂತಹವರ ಮನೆಗೆ ಒಂದೊಂದು ವಿದ್ಯುತ್ ದೀಪವನ್ನು ಹಾಕಿಕೊಡುವುದು ಒಳ್ಳೆಯ ದೆಂಬುದಾಗಿ ಮಾನ್ಯ ಮುಖ್ಯಮಂತ್ರಿಗಳೇ ಹೇಳಿದರು, ಅದನ್ನು ಕೇಳಿ ನಾವೆಲ್ಲಾ ಸಂತೋಷ ಪಟ್ಟುಕೊಂಡೆವು. ಆದೇ ರೀತಿ ಮಾನ್ಯ ಮುಖ್ಯಮಂತ್ರಿಗಳು ನಾವು ತಂದಿರತಕ್ಕ ಈ ಯೋಜನೆಯನ್ನು ಕೇಂದ್ರ ಸರ್ಕಾರ ಕೂಡ ಕಾಪಿ ಮಾಡಿಕೊಂಡಿದೆ ಎಂಬುದಾಗಿ ಹೇಳಿದರು ಈ ಯೋಜನೆಯು ಬಗ್ಗೆ ಹೇಳುವುದಾದರೆ, ಸರ್ಕಾರದವರು ಯೋಜನೆಯನ್ನು ಏನು ಹಾಕಿದ್ದಾರೋ ಅದನ್ನು ತೆಗೆಸತಕ್ಕ. ಇನ್ನೊಂದು ಕಾರ್ಯಕ್ರಮವನ್ನು ಕೇಂದ್ರ ಸರ್ಕಾರ ಹಾಕಿಕೊಳ್ಳಬೇಕಾಗಿದೆ. ಆ ಬಡವರ ಮನೆಗೆ ದೀಪವನ್ನು ಹಾಕತಕ್ಕಂತಹ ಕಾಲವಲ್ಲಿ ಉಪಯೋಗಿಸಿದಂತಹ ವಿದ್ಯುತ್ತಿನ ಚಾರ್ಜನ್ನು ಕೊಡಬೇಕಾಗುತ್ತದೆಂದು ಹೇಳಿರಲಿಲ್ಲ. ಇವತ್ತು ಒಂದೊಂದು ಮನೆಯಲ್ಲೂ ಆ ಒಂದು ದೀಪವನ್ನು ಉರಿಸಿರುವುದರಿಂದ ೧೫೦ ರೂಪಾಯಿಗಳವರೆಗೆ ಬಿಲ್ಲು ಬಂದು ಅವರು ಇವತ್ತು ಆ ಹಣವನ್ನು ಕಟ್ಟಿದೇ ಇರತಕ್ಕ ಪರಿಸ್ಥಿತಿ ಬಂದು ವಿದ್ಯುತ್‌ನ್ನು ಡಿಸ್ ಕನೆಕ್ಟ್ ಮಾಡತಕ್ಕ ಕಾರ್ಯಕ್ರಮ ನಡೆಯುತ್ತಿದೆ. ಹಣವನ್ನು ಕೊಡಬೇಕೆಂದು ವಿದ್ಯುಚ್ಛಕ್ತಿ ಮಂಡಲಿಯ ಅಧಿಕಾರಿಗಳು ಒತ್ತಾಯ ಮಾಡುತ್ತಿದ್ದಾರೆ. ಇಂತಹ ಕಾರ್ಯಕ್ರಮವನ್ನು ಮಾಡುವುದು ಸರಿಯೇ ಎಂಬುದಾಗಿ ಸರ್ಕಾರವನ್ನು ನಾನು ಪ್ರಶ್ನೆ ಮಾಡುತ್ತಿದ್ದೇನೆ. ಅವರು ವಿದ್ಯುಚ್ಛಕ್ತಿ ಚಾರ್ಜನ್ನು ಕಟ್ಟುವಂತಹ ಪರಿಸ್ಥಿತಿಯನ್ನು ಮೊದಲೇ ಅವರಿಗೆ ತಿಳಿಸಬೇಕಾಗಿತ್ತು. ಆ ಕೆಲಸವನ್ನು ಸರ್ಕಾರ ಮಾಡಿಯೇ ಇಲ್ಲ. ಈಗ ಏಕಾಏಕಿ ವಿದ್ಯುಚ್ಛಕ್ತಿ ಉಪಯೋಗಿಸಿದ ಬಾಬ್ತು ಹಣವನ್ನು ವಸೂಲಿ ಮಾಡುವುದಕ್ಕೆ ಪ್ರಾರಂಭ ಮಾಡಿದೆ.

ಅಧ್ಯಕ್ಷರು.—ತಮ್ಮದು ೬ ನಿಮಿಷವಾಯಿತು.....

ಶ್ರೀ ಬಿ. ಕೆಂಕ್ಕಪ್ಪ.—ಸರ್ಕಾರದಲ್ಲಿ ಅಧಿಕಾರಿಗಳು ಲಂಚವನ್ನು ತೆಗೆದುಕೊಳ್ಳುತ್ತಿದ್ದಾರೆ ಎಂಬುದು ಸರ್ವ ವ್ಯಾಪ್ತಿಯಾಗಿದ್ದು, ಅದನ್ನು ಹೋಗಲಾಡಿಸುವುದಕ್ಕೋಸ್ಕರ ನಾನು ಅಧಿಕಾರಕ್ಕೆ ಬರಬೇಕಾಗಿದೆ, ಆದ್ದರಿಂದ ನೀವು ನಮಗೆ ಪುನ ಕೊಡಿ ಎಂಬುದಾಗಿ ಈಗ ಸರ್ಕಾರದಲ್ಲಿರತಕ್ಕಂತಹವರು ಅಂದು ಜನತೆಯನ್ನು ಕೇಳಿದ್ದಾಯಿತು. ಆ ಬಗ್ಗೆ ಎಷ್ಟು ವಿಚಾರಣೆಗಳನ್ನು ಮಾಡಿದ್ದಾರೆ? ಆ ವಿಚಾರಣಾ ಸಮಿತಿಯಿಂದ ವರದಿಗಳು ಬಂದ ಮೇಲೆ ಎಷ್ಟು ಜನರ ಮೇಲೆ ಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ತಿಳಿಸಬೇಕು. ಕೆಲವೊಂದು ಕೇಸುಗಳಲ್ಲಿ ಆ ಬಗ್ಗೆ ನಿರ್ದಿಷ್ಟವಾದ ವರದಿಗಳು ಬಂದಿದ್ದರೂ ಅವರ ಮೇಲೆ ಆಕ್ಷನ್ ತೆಗೆದುಕೊಳ್ಳದಿದ್ದರೆ, ಅಂತಹ ವಿಚಾರಣೆಗಳನ್ನು ಮಾಡುವುದಾದರೂ ಏಕೆ? ಅದಕ್ಕಾಗಿ ಸಿಬ್ಬಂದಿ ಕೂಡ ಏಕೆ? ಪೂರ್ಣವಾಗಿ ಇದನ್ನು ತಡೆಯುದಿದ್ದರೂ ಸ್ವಲ್ಪ ಮಟ್ಟಿಗಾದರೂ ಅದನ್ನು ತಡೆಗಟ್ಟುತಕ್ಕ ಪ್ರಯತ್ನವನ್ನು ಸರ್ಕಾರ ಮಾಡದಿದ್ದರೆ ಹೇಗೆ? ಈ ರಾಜ್ಯದಲ್ಲಿ ಒಬ್ಬರೇ ಸಾವಿರಾರು ವರ್ಷಗಳ ಕಾಲ ಅಧಿಕಾರದಲ್ಲಿರಬಹುದು. ಅದು ಮುಖ್ಯ ಅಲ್ಲ ಆ ಬಗ್ಗೆ ದೊಡ್ಡದಾಗಿ ಪ್ರಚಾರ ಮಾಡಿಸಿಕೊಂಡು ಅಧಿಕಾರಕ್ಕೆ ಬಂದಂತಹ ಜನ ಮಾಡಿದ್ದಾದರೂ ಏನು ಎಂಬುದನ್ನು ಪ್ರಶ್ನೆ ಮಾಡಬೇಕಾಗಿದೆ. ಆ ಬಗ್ಗೆ ಈ ಸರ್ಕಾರ ಪ್ರಯತ್ನವನ್ನೇ ಮಾಡಿಲ್ಲವೆಂದು ಹೇಳಬೇಕಾಗಿದೆ. ಜೊತೆಗೆ ಈ ಸಂದು ಆಯವ್ಯಯ ಏನು ಇದೆ. ಇದು ನಪುಂಸಕತೆಯಿಂದ ಕೂಡಿದ ಬಡ್ಜೆಟ್ ಆಗಿದೆ. ಕೊರತೆಯನ್ನು ತುಂಬತಕ್ಕ ದಿಸೆಯಲ್ಲಿ ತೆರಿಗೆಗಳಿಲ್ಲ. ಜೊತೆಗೆ ಅಭಿವೃದ್ಧಿ ಕಾರ್ಯಕ್ರಮಗಳು ಯಾವುದೂ ಇಲ್ಲ. ಇದರಿಂದ ರಾಜ್ಯದ ಅಭಿವೃದ್ಧಿಯನ್ನು ಮಾಡುವುದಕ್ಕಾಗುವುದಿಲ್ಲವೆಂದು ಹೇಳಿ ನನಗೆ ಮಾತನಾಡಲು ೫ ನಿಮಿಷ ಅವಕಾಶವನ್ನು ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—೫ ನಿಮಿಷ ಅಲ್ಲ ತಮ್ಮಗೆ ೮ ನಿಮಿಷವಾಯಿತು. ಈಗ ಶ್ರೀ ಶಿವಸಂಜಪ್ಪನವರು ೫ ನಿಮಿಷ ಮಾತನಾಡಬಹುದು.

† ಶ್ರೀ ಜೆ.ಎನ್. ಶಿವನಂಜಪ್ಪ (ಗುಬ್ಬಿ).—ಸನ್ಮಾನ್ಯ ಅಧ್ಯಕ್ಷರೆ, ಯಾವುದೇ ಪಕ್ಷ ಇರಲಿ, ಬಜೆಟ್ಟನ್ನು ಮಂಡನೆ ಮಾಡಿದಂಗ ಆ ರಾಜ್ಯದ ಅಥವಾ ರಾಷ್ಟ್ರದ ಜನರ ಮನಸ್ಸಿನಲ್ಲಿ ಸ್ಪಂದನ ಮಾಡುತ್ತದೆ. ಇವತ್ತಿನದಿವಸ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಮಂಡನೆ ಮಾಡಿರತಕ್ಕ ಈ ಬಜೆಟ್ ಕೇವಲ ಬೂಸಾ ಬಜೆಟ್ ಎಂದು ಹೇಳಿದರೆ ತಪ್ಪಾಗಲಾರದು. ಕೊರತೆ, ಸಂಸ್ಥಾನ್ಮೂಲಗಳು, ಕ್ಯೂಥೀಕರಣ ತೆರಿಗೆ ವಿನಾಯಿತಿಯನ್ನು ಯಾರಿಗೆ ಮಾಡಿದ್ದಾರೆಂದರೆ ದೊಡ್ಡ ದೊಡ್ಡ ಬಂಡವಾಳಗಾರರಿಗೆ ಹಾಗೂ ನೀಲಗಿರಿ ಪರವನ್ನು ಬೆಳೆಯತಕ್ಕಂತಹವರಿಗೆ ತೆರಿಗೆ ವಿನಾಯಿತಿಯನ್ನು ನೀಡಲಾಗಿದೆ. ಆದೇ ರೀತಿ ಕ್ಲಾಡ್ಜ್ ವಾಚ್‌ಗಳನ್ನು ತಯಾರು ಮಾಡತಕ್ಕಂತಹವರಿಗೆ, ಇವತ್ತು ಬೆಂಗಳೂರು ನಗರದಲ್ಲಿ ಆದೇ ಇಂಡಸ್ಟ್ರಿಯಾಗಿದೆ, ಅವರೂ ಎಲ್ಲೆಲ್ಲೂ ಬೋರ್ಡ್ ಹಾಕಿಕೊಂಡಿದ್ದಾರೆ, ಅವರಿಗೆ ವಿನಾಯಿತಿಯನ್ನು ನೀಡಿದ್ದಾರೆ. ಒಟ್ಟಾರೆ ಹೇಳುವುದಾದರೆ, ಈ ಬಜೆಟ್ಟಿನಲ್ಲಿ ಏನೂ ಇಲ್ಲ. ಜನಗಳನ್ನು ಮೋಸದ ದಾರಿಗೆ ಎಳೆಯತಕ್ಕ ಒಂದು ಪ್ರಯತ್ನವನ್ನು ಇವರು ಮಾಡಿದ್ದಾರೆಂದರೆ ತಪ್ಪಾಗಲಾರದು. ಇವರು ಅಧಿಕಾರಕ್ಕೆ ಬರುವಾಗ ಕೇವಲರಡು ಆಶ್ವಾಸನೆಗಳನ್ನು ಜನತೆಗೆ ಕೊಟ್ಟರು. ಜನತಾ ಪಕ್ಷ ಅಧಿಕಾರಕ್ಕೆ ಬಂದರೆ, ಚಿಕ್ಕದಾಗಿರತಕ್ಕ, ಚೊಕ್ಕವಾಗಿರತಕ್ಕ ದಕ್ಷ ಆಡಳಿತ ಕೊಡತಕ್ಕಂತಹ ಒಂದು ಮಂತ್ರಿ ಮಂಡಲವನ್ನು ರಚನೆ ಮಾಡುತ್ತೇವೆಂದು ಹೇಳಿದ್ದರು ಇದನ್ನು ವಿಶ್ಲೇಷಣೆ ಮಾಡಿ ನೋಡಿದಾಗ, ಇದರ ಬಗ್ಗೆ ಯೋಚನೆ ಮಾಡಿದಾಗ ಇವತ್ತು ಇವರ ಮಂತ್ರಿ ಮಂಡಲ ಚಿಕ್ಕದಾಗಿಯಂತೂ ಆಗಿಲ್ಲ. ೩೫ ಜನ ಮಂತ್ರಿಗಳು ಇದ್ದಾರೆ, ಈ ರಾಜ್ಯಕ್ಕೆ ೩೫ ಜನ ಮಂತ್ರಿಗಳು ಬೇಕೇ ಎನ್ನುವ ದೊಡ್ಡ ಪ್ರಶ್ನೆಯನ್ನು ಹಾಕಿದಾಗ, ಜಿಲ್ಲಾ ಪರಿಷತ್ ಅಧಿಕಾರಕ್ಕೆ ಬಂದಮೇಲೆ ೩೫ ಜನ ಬೇಕಾಗಿಲ್ಲ ಕೇವಲ ೧೦ ಜನ ಮಂತ್ರಿಗಳು ಇದ್ದರೆ ಸಾಕು ಎಂದು ಹೇಳಬೇಕಾಗುತ್ತದೆ. ಏಕೆಂದರೆ, ರಾಮಯ್ಯನವರು ನನ್ನ ಜಿಲ್ಲೆಯ ನಿರ್ವಹಣೆ ಹೊತ್ತ ಮಂತ್ರಿಗಳಾಗಿದ್ದಾರೆ. ಅವರಿಗೆ ಯಾವುದಾದರೂ ಒಂದು ಕೆಲಸದ ಬಗ್ಗೆ ಹೇಳಿದರೆ ಅವರು ಒಂದು ಹ್ಯಾಂಡ್ ಪೋಸ್ಟ್ ರೀತಿ ಜಿಲ್ಲಾ ಪರಿಷತ್ ಕಡೆ ತೋರಿಸುತ್ತಾರೆ. ಸಿದ್ದರಾಮಯ್ಯನವರನ್ನು ಕೇಳಿದರೆ, ಮಾನ್ಯ ರಘುಪತಿಯವರನ್ನು ಕೇಳಿದರೆ ಎಲ್ಲಾ ಆ ಕಡೆ ತೋರಿಸುತ್ತಾರೆ. ಬರೀ ಹ್ಯಾಂಡ್ ಪೋಸ್ಟ್ ಆಗಲಿಕ್ಕೆ ೩೫ ಜನ ಇರಬೇಕೇ ಎಂಬುದು ದೊಡ್ಡ ಪ್ರಶ್ನೆ ಇವತ್ತು ಮಂತ್ರಿಗಳ ಸ್ಥಾನದಲ್ಲಿ ಇರುವವರು ಎಷ್ಟು ಜನ? ವಿವಿಧ ಕಾರ್ಪೊರೇಷನ್ ಹಾಗೂ ಕಮಿಟಿಗಳಲ್ಲಿ ಇರತಕ್ಕವರು ಸುಮಾರು ೪೦ ಜನ. ಹೀಗೆ ಸುಮಾರು ೧೫೦ ಜನ ಮಂತ್ರಿ ಸ್ಥಾನದಲ್ಲಿ ಇರತಕ್ಕವರನ್ನು ಇಟ್ಟುಕೊಂಡು ನಿಜವಾಗಿ ಸರ್ಕಾರ ನಡೆಸುವುದಕ್ಕೆ ಸಾಧ್ಯವೇ? ಬಡ ರೈತನ ಹಣವನ್ನು ಯಾವ ರೀತಿ ಇವರು ಪೋಲು ಮಾಡುತ್ತಿದ್ದಾರೆ ಎಂದರೆ ಜನತಾ ಪಕ್ಷವನ್ನು ವ್ಯವಸ್ಥಿ ಮಾಡುವುದಕ್ಕೆ ಇಷ್ಟು ಜನರನ್ನು ಸಾಕುತ್ತಿದ್ದೀರಿ ಎಂದು ಹೇಳಿದರೆ ತಪ್ಪಾಗಲಾರದು. ಬಡ ಬೋರೇಗೌಡನ ಹಣವನ್ನು ಈ ರೀತಿ ನೀವು ಪೋಲು ಮಾಡುತ್ತಿದ್ದೀರಿ. ಇವತ್ತು ಒಬ್ಬ ರೈತ ಕಂಡಿಯನ್ನು ಅಗೆಯುವುದಕ್ಕೆ ನೀರನ್ನು ಕೇಳಿದರೆ ಜಿಲ್ಲಾ ಪರಿಷತ್ತಿನ ಕಡೆ ತೋರಿಸುತ್ತೀರಿ. ಇವತ್ತು ಅಧಿಕಾರವನ್ನು ನಿಮ್ಮ ಕೈಯ್ಯಲ್ಲಿ ಇಟ್ಟುಕೊಂಡು ಬರೀ ಜುಟ್ಟನ್ನು ಅವರ ಕೈಗೆ ಕೊಟ್ಟಿದ್ದೀರಿ. ಇರುವ ಮಂತ್ರಿ ಮಂಡಲದ ಮಂತ್ರಿಗಳೂ ಚೊಕ್ಕವಾಗಿದ್ದಾರೆಯೇ ಎಂದರೆ, ಪ್ರತಿಯೊಬ್ಬರಲ್ಲೂ ಭ್ರಷ್ಟಾಚಾರ ಎದ್ದು ಕಾಣುತ್ತಿದೆ ಇವರು ಅಧಿಕಾರಕ್ಕೆ ಬಂದಮೇಲೆ ಯಾವ ರೀತಿ ಭ್ರಷ್ಟಾಚಾರ ಮನೆಮಾತಾಗಿದೆ, ವಿದೇಜ್ ಅಕೌಂಟೆಂಟ್‌ನಿಂದ ಹಿಡಿದು ವಿಧಾನಸೌಧದವರೆವಿಗೆ ದೂರುಗಳು ಕೇಳಿಬರುತ್ತಿವೆ. ತುಮಕೂರು ಜಿಲ್ಲೆಗೆ ವೈ.ಕೆ. ರಾಮಯ್ಯನವರು ಉಸ್ತುವಾರಿ ಮಂತ್ರಿಗಳಾಗಿದ್ದಾರೆ. ಪಾಮೊಲಿನ್‌ನಲ್ಲಿ ೮೫ ರಿಂದ ೯೫ ಲಕ್ಷದವರೆಗೆ ಅವ್ಯವಹಾರ ನಡೆದಿದೆ. ತಾಳೆಎಣ್ಣೆ ಕಳ್ಳಸಂತೆಯಲ್ಲಿ ವ್ಯಾಪಾರ ಆಗಿದೆ ಎಂದು ಪದೇ ಪದೇ ಹೇಳುತ್ತಿದ್ದೇವೆ. ಇವತ್ತಿನವರೆಗೆ ಸರ್ಕಾರವಾಗಲೀ, ಮಂತ್ರಿ ಯಾರೇ ಆಗಲಿ ಇದರ ಬಗ್ಗೆ ಚಕಾರ ಎತ್ತಿಲ್ಲ. ನಮ್ಮಲ್ಲಿ ಸೀಮೆಎಣ್ಣೆಯನ್ನು ೧ ಲೀಟರ್‌ಗೆ ೪ ರೂಪಾಯಿಯಂತೆ ಮಾರಾಟ ಮಾಡುತ್ತಿದ್ದಾರೆ. ಇದು ಸರ್ಕಾರಕ್ಕೆ ಗೊತ್ತಿದ್ದು, ಅನ್ಯಾಯ ಆಗುತ್ತಿದೆ ಎಂದು ತಿಳಿದಿದ್ದರೂ, ಪತ್ರಿಕೆಗಳಲ್ಲಿ ಇದು ಬಂದಿದ್ದರೂ ಕೂಡಾ ಯಾರೂ ಚಕಾರ ಎತ್ತಿಲ್ಲ. ಅದುದರಿಂದ ಅನಿವಾರ್ಯವಾಗಿ ಇದು ವಂಚಕ ಬಿಟ್ಟ ಸರ್ಕಾರ ಎಂದರೆ ತಪ್ಪಾಗಲಾರದು. ಪ್ರಾಮಾಣಿಕವಾಗಲೀ, ಮರ್ಯಾದೆಯಾಗಲೀ, ನಾಚಿಕೆಯಾಗಲೀ ಇವರಿಗೆ ಇದೆಯೇ ಎಂದು ನಾನು ಕೇಳುತ್ತಿದ್ದೇನೆ. ಯಾರಿಗೋಸ್ಕರ ೩೫ ಜನರನ್ನು ಇಟ್ಟುಕೊಂಡಿದ್ದೀರಿ? ಕೇವಲ ಜಿಲ್ಲಾ ಪರಿಷತ್ತಿನ ಕಡೆ ಕೈತೋರಿಸುವುದಕ್ಕೋಸ್ಕರ ೩೫ ಜನರು ಬೇಕೇ? ಇವತ್ತಿನ ದಿವಸ ಕೇವಲ ೪ ಜನ ಮಂತ್ರಿಗಳು ಇದ್ದರೆ ಈ ರಾಜ್ಯವನ್ನು ನಡೆಸಬಹುದು ಮಾನ್ಯ ರಾಮಕೃಷ್ಣ ಹೆಗಡೆಯವರು, ರಾಚಯ್ಯನವರು, ಬೊಮ್ಮಾಯಿಯಂವರೂ ಹಾಗೂ ದೇವೇಗೌಡರು ಈ ನಾಲ್ಕು ಜನ ಸಾಕು. ಈ ೩೫ ಜನ ಏತಕ್ಕೆ ಬೇಕು? ಈ ೩೫ ಜನರು ಏನು ಕೆಲಸ ಮಾಡುತ್ತಿದ್ದಾರೆ

ಎಂಬುದನ್ನು ಮಾನ್ಯ ರಾಮಕೃಷ್ಣ ಹೆಗಡೆಯವರು ಹೇಳಬೇಕು. ಇವತ್ತು ಜಿಲ್ಲಾ ಪರಿಷತ್ತುಗಳ ಅಸ್ತಿತ್ವಕ್ಕೆ ಬಂದಮೇಲೆ ಹಳ್ಳಿಗಳ ಸ್ಥಿತಿ ಏನಾಗಿದೆ? ಮನೆ ಮನೆಯಲ್ಲಿ ಬಡಿದಾಟ ಪ್ರಾರಂಭವಾಗಿದೆ. ಪಂಡಲ ಪಂಚಾಯಿತಿಯಲ್ಲಿ ಪಾರ್ಟಿ ಮೇಲೆ ಚುನಾವಣೆ ಬೇಡ ಎಂದು ನಾವು ಬಡಕೊಂಡೆವು. ಇವತ್ತು ಅಲ್ಲಿ ಗಂಡಹೆಂಡಿರ ನಡುವೆ, ಮಾವ ಅಳಿಯಂದಿರ ನಡುವೆ, ಅತ್ತೆ ಸೊಸೆಯರ ನಡುವೆ ಜಗಳ ಪ್ರಾರಂಭವಾಗಿದೆ. ಮೊನ್ನೆ ಜನತಾ ಪಕ್ಷದ ಹೆಣ್ಣುಮಗಳೊಬ್ಬಳನ್ನು ಕಾಂಗ್ರೆಸ್ ಯುವಕ ಪ್ರೀತಿ ಮಾಡಿದ್ದನು ಆನಂತರ ಚುನಾವಣೆಯಲ್ಲಿ ಜನತಾ ಪಕ್ಷ ಸೋತಿತು. ಇದರಿಂದ ಅವರ ಮದುವೆಗೇ ಸಂಚಕಾರ ಬಂದಿತು. ಅವರು ಜನತಾ ಪಕ್ಷದವರು, ಅವರು ಸೋತಿದ್ದಾರೆಂದು ನಾವು ಗಂಡು ಕೊಡುವುದಿಲ್ಲವೆಂದು ಈ ಕಡೆಯವರು ಹೇಳಿದರು. ಎಂದರೆ ಇವರ ರಾಜಕೀಯ ಏನಾಗಿದೆ ಎಂದರೆ ಕೇವಲ ಒಂದು ಪಕ್ಷವನ್ನು ಬೆಳೆಸುವುದಕ್ಕೋಸ್ಕರ ಕೋಟ್ಯಾಂತರ ರೂಪಾಯಿಗಳನ್ನು, ಕರ್ನಾಟಕ ರಾಜ್ಯದ ಜನತೆಯನ್ನು ಮೋಸ ಮಾಡಿ ಪಕ್ಷವನ್ನು ಬೆಳೆಸುವುದಕ್ಕೆ ಹೊರಟಿದ್ದಾರೆ. ಇದರಿಂದ ಜನರಿಗೆ ಅನುಕೂಲ ಆಗುತ್ತಾ ಇಲ್ಲ. ಇವತ್ತು ಇವರು ಯಾರನ್ನು ಜಫ್ತಿ ಮಾಡುತ್ತಿದ್ದಾರೆ. ಇವರು ದಾಸಪ್ಪನನ್ನು, ಕೋಡಿಯವರನ್ನು ಜಫ್ತಿ ಮಾಡುತ್ತಾ ಇಲ್ಲ. ಮಾನ್ಯ ರಾಮಯ್ಯನವರು ಉಸ್ತುವಾರಿ ಮಂತ್ರಿಯಾಗಿರುವ ನಿಟ್ಟೂರು ಹೋಬಳಿ ಕಾರೇನಹಳ್ಳಿಯಲ್ಲಿ ೧೦ ಜನ ಹರಿಜನರ ಮನೆಯನ್ನು ದೋಚಿದ್ದಾರೆ. ಅವರ ಮನೆಯಲ್ಲಿ ಇರುವುದನ್ನೆಲ್ಲಾ ಜಫ್ತಿ ಮಾಡಿ ಎಂನೆಗೆ ಬೀಗ ಹಾಕಿದ್ದಾರೆ. ಇವರು ಜಫ್ತಿ ಮಾಡಿದ ಸಮಯದಲ್ಲಿ ಆ ಜನ ಮನೆಯಲ್ಲಿ ಇರಲಿಲ್ಲ.

ಈ ರೀತಿ ನಿಮ್ಮ ಜಫ್ತಿ ಕಾರ್ಯಕ್ರಮ ನಡೆದಿದೆ. ದಾಸಪ್ಪ ಅವರನ್ನು ಮುಟ್ಟುವುದಿಲ್ಲ. ಬಂಡವಾಳಗಾರರನ್ನು ಮುಟ್ಟುವುದಿಲ್ಲ, ತಲೆಗೆ ಬಟ್ಟೆಯಿಲ್ಲದೆ, ಹೊಟ್ಟೆಗೆ ಹಿಟ್ಟಿಲ್ಲದೆ ಇರತಕ್ಕ ನಿರಪರಾಧಿ, ಬಡಪರನ್ನ ಶೋಷಣೆ ಮಾಡುತ್ತಿದ್ದೀರಿ. ಬಡಪರಿಗೆ ಎಂತಾದರೂ ಉಪಯೋಗ ಮಾಡುತ್ತಿದ್ದಕ್ಕೆ ನಿಮ್ಮಿಂದ ಸಾಧ್ಯವೇ ? ಅಗ್ರಿಕಲ್ಚರ್ ಇನ್‌ಕಂಟ್ಯಾಕ್ಸ್ ೧ ಲಕ್ಷದ ೬ ಸಾವಿರ ಕೊಡಬೇಕೆಂದು ಹೇಳಿ ಸುಮಾರು ೪ ಕೋಟಿ ರೂಪಾಯಿಗಳ ಬೆಲೆಬಾಳುವ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡರು ೪ ಕೋಟಿ ರೂಪಾಯಿ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಯಾವುದೇ ವಿಚಾರಣೆಯಿಲ್ಲ. ಏನೂ ಇಲ್ಲ. ಅಧಿಕಾರಿಗಳು ಹೇಳುತ್ತಾರೆ ನಮಗೆ ಸರ್ಕಾರದಿಂದ ಒತ್ತಾಯ ಬಂದಿದೆ ನಾವು ಹೇಗಾದರೂ ಮಾಡಿ ವಸೂಲಿ ಮಾಡಬೇಕು ಎಂದು. ಆದಕ್ಕೆ ಬದಲಾಗಿ ಕೊಳ್ಳಿಹೊಡೆಯಿರಿ. ಜನತಾ ಪಕ್ಷದ ಸರ್ಕಾರ ಜನತೆಗೆ ಖಂಡಿತಾ ಅನುಕೂಲ ಮಾಡಿಲ್ಲ. ಈ ಬಡ್ಜೆಟ್‌ನಲ್ಲಿ ಪೋಲಿಸ್‌ನವರಿಗೆ ಒಂದಿಷ್ಟು ಎಂಜಲು ತರಹ ಕೊಟ್ಟಿದ್ದಾರೆ. ೫೦ ರೂಪಾಯಿಗಳನ್ನು ಸ್ಪೆಷಲ್ ಡೆಂಡರಿ ಗ್ರಾಜುಯೇಟ್ಸ್‌ಗಳಿಗೆ ಹೆಚ್ಚು ಮಾಡಿದ್ದಾರೆ. ಬರೀ ಅಂಕಿ ಅಂಶಗಳನ್ನು ಮಾತ್ರ ಕೊಟ್ಟಿದ್ದಾರೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಪಾರ್ಲಿಮೆಂಟ್‌ನಲ್ಲಿರಬೇಕಿತ್ತು, ಇಲ್ಲಿದ್ದಾರೆ. ಅವರು ಪಾರ್ಲಿಮೆಂಟ್‌ನಲ್ಲಿದ್ದಾಗ ಈ ಬಗ್ಗೆ ಏನೂ ಮಾತನಾಡಲಿಲ್ಲ. ಇವರ ಬಡ್ಜೆಟ್ ಭಾಷಣದಲ್ಲಿ ೧೨ ಪುಟಗಳನ್ನು ಕೇಂದ್ರ ಸರ್ಕಾರ ರಾಜೀವ್‌ಗಾಂಧಿ ಅಲ್ಲಿಯ ಬಜೆಟ್ ಬಗ್ಗೆ ಮೀಸಲಿಟ್ಟಿದ್ದಾರೆ. ಅಲ್ಲಿದ್ದಾಗ ಇವರು ಈ ರೀತಿ ಮಾತನಾಡಬೇಕಾಗಿತ್ತು. ಆಗ ಇವರ ಗಂಡಸುತನ ಎಲ್ಲಿ ಹೋಗಿತ್ತು ? ಇಲ್ಲಿ ಏತಕ್ಕೆ ೧೨ ಪುಟಗಳನ್ನು ವೇಸ್ಟ್ ಮಾಡಬೇಕಾಗಿತ್ತು ? ಕೇಂದ್ರ ಸರ್ಕಾರವನ್ನು ಬೈಯ್ಯುವುದಕ್ಕೆ ನಮ್ಮ ಸರ್ಕಾರದ ದುಡ್ಡು ಬೇಕಾಗಿಲ್ಲ. ಶಾಸಕರು ಬಾಯಿ ಮುಚ್ಚಿಸಬೇಕು ಪ್ರೆಸ್‌ನವರ ಬಾಯಿ ಮುಚ್ಚಿಸಬೇಕೆನ್ನುವುದು ಇದೆಲ್ಲಾ ಹುಚ್ಚು ಹುಚ್ಚಾಟವೇನು? ಇವರು ರಾಜ್ಯ ಸಭೆಯಲ್ಲಿದ್ದಾಗ ಈ ಬಗ್ಗೆ ಒಂದೂ ಮಾತೂ ಸಹ ಆಡಲಿಲ್ಲ. ಅಲ್ಲಿದ್ದಾಗ ಒಂದು ಶಬ್ದ ಆ ಬಗ್ಗೆ ಚಕಾರವನ್ನು ಎತ್ತದೆ ಆ ಚಟವನ್ನು ಇಲ್ಲಿ ತೀರಿಸಿಕೊಳ್ಳುವುದಕ್ಕೆ ಹೊರಟಿದ್ದಾರೆ. ನಮ್ಮ ತುಮಕೂರು ಜಿಲ್ಲೆಗೆ ಹೇಮಾವತಿ ನೀರನ್ನು ೧೯೮೩ಕ್ಕೆ ಕೊಡುತ್ತೇವೆಂದು ಹೇಳಿದ್ದರು ೧೯೮೮-೮೯ನೇ ವರ್ಷ ಬಂದರೂ ಮಾಡಲಿಕ್ಕೆ ಆಗಲಿಲ್ಲ. ನೀರಾವರಿ ಮಂತ್ರಿಗಳಾದ ಎಚ್. ಡಿ. ದೇವೇಗೌಡರು ನೀರಾವರಿಗೆ ಸಾಕಷ್ಟು ಹಣವನ್ನು ಕೊಡಲಿಲ್ಲವೆಂದು ರಾಜೀನಾಮೆಯನ್ನು ಕೊಟ್ಟಿದ್ದಾರೆ. ೩೦೦ ಕೋಟಿ ರೂಪಾಯಿಗಳಲ್ಲಿ ೧೦೦ ಕೋಟಿಗಳನ್ನು ಕೊಡಲಿಕ್ಕೆ ಆಗಿಲ್ಲ ಇವರ ಪ್ರಚಾರಕ್ಕೋಸ್ಕರ ನಾಲಕ್ಕಿ ಪುಸ್ತಕಗಳನ್ನು ಪ್ರಿಂಟ್ ಮಾಡಿಸಿದ್ದಾರೆ ಅದಕ್ಕಾಗಿ ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆ ಅದನ್ನು ನೀರಾವರಿ ಯೋಜನೆಗಾಗಿ ಕೊಡಬೇಕಾಗಿತ್ತು. ನೀರಾವರಿಗೆ ಹೆಚ್ಚು ಹಣವನ್ನು ಕೊಡಬೇಕಾಗಿತ್ತು. ಅಧ್ಯಕ್ಷರೇ ನಾನು ಹೆಚ್ಚು ಮಾತನಾಡುವುದನ್ನು ಕಟ್ ಮಾಡುತ್ತಿದ್ದೀರಿ, ಆದ್ದರಿಂದ ನಾನು ಸಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಡಿ. ಎ. ಚಿನ್ನಪ್ಪ (ಮಡಿಕೇರಿ).— ಮಾನ್ಯ ಅಧ್ಯಕ್ಷರೇ, ೧೯೮೮-೮೯ನೇ ಸಾಲಿನ ಬಜೆಟ್‌ನ್ನು ವಿರೋಧಿಸುತ್ತಾ, ಈ ಬಜೆಟ್ ಪೂರ ಐಶ್ವರ್ಯವಂತರ ಬಜೆಟ್ ಆಗಿದೆಯೆಂದು ಹೇಳಿದರೆ ತಪ್ಪಾಗಲಾರದು. ಬಡವನಿಗಾಗಿ ಈ ಬಜೆಟ್‌ನಲ್ಲಿ ಯಾವ ವಿಷಯವನ್ನೂ ಚರ್ಚೆ ಮಾಡಿಲ್ಲ. ಮಾನ್ಯ ಮಂಬ್ಯಿ ಮಂತ್ರಿಗಳು ಕೊಡಗು ಮತ್ತು ಗುಲ್ಬರ್ಗ ಜಿಲ್ಲೆಗಳಿಗೆ ಮಲತಾಯಿ ಧೋರಣೆಯನ್ನು ತೋರಿಸಿದ್ದಾರೆ ಆ ಜಿಲ್ಲೆಗಳಿಗೆ ಯಾವ ಯೋಜನೆಯನ್ನು ತೋರಿಸಲಿಲ್ಲ. ನನ್ನ ಪಕ್ಕದಲ್ಲಿರುವ ಶಾಸಕರು ಹೇಳುತ್ತಿದ್ದಾರೆ ದಕ್ಷಿಣ ಕನ್ನಡ ಜಿಲ್ಲೆಯನ್ನು ಸಹ ಮರೆತಿದ್ದಾರೆಂದು ಕೊಡಗಿಗೆ ಬಹಳಷ್ಟು ಅನ್ಯಾಯ ಮಾಡಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಪ್ರತಿಯೊಂದು ಯೋಜನೆಯನ್ನು ಬೆಂಗಳೂರು, ಮೈಸೂರು, ಹುಬ್ಬಳ್ಳಿ ಇಂತಹ ಕಡೆಗಳಲ್ಲಿ ಮಾತ್ರ ಹಾಕಿ ಬರತಕ್ಕ ಆದಾಯವನ್ನು ಇಲ್ಲಿಗೆ ಸರ್ಕ್ಯುಲೇಟ್ ಮಾಡುತ್ತಿದ್ದಾರೆ. ನಮ್ಮ ಜಿಲ್ಲೆಗಳಿಗೆ ಯಾವ ಯೋಜನೆಯನ್ನು ಹಾಕಿಕೊಟ್ಟಿಲ್ಲ. ಈ ಸರ್ಕಾರ ಭ್ರಷ್ಟ ಸರ್ಕಾರವೆಂದು ಹೇಳಿದರೆ ತಪ್ಪಾಗಲಾರದು ಈ ಬಗ್ಗೆ ಒಂದು ಕಮಿಟಿಯನ್ನು ಮಾಡಿ ಯಾವ ತರಹ ಭ್ರಷ್ಟಾಚಾರ ಇಲ್ಲಿ ನಡೆದಿದೆ, ಅದನ್ನು ನಿರ್ಮೂಲನ ಮಾಡುವುದು ಹೇಗೆ ಎಂಬುದರ ಬಗ್ಗೆ ವಿಚಾರ ಮಾಡುತ್ತಿಲ್ಲ. ಇವತ್ತು ಜಿಲ್ಲಾ ಪರಿಷತ್ ಬರಲಾಗಿ, ರಾಜ್ಯದಲ್ಲಿ ಎರಡು ಸರ್ಕಾರಗಳು ನಡೆಯುತ್ತಿವೆ. ಒಂದು ಜಿಲ್ಲಾ ಪರಿಷತ್ ಆದಕ್ಕೆ ಪ್ಯಾರಲಲ್ ಆಗಿ ಈ ಸರ್ಕಾರವಿದೆ. ೯ ಕೋಟಿ ರೂಪಾಯಿಗಳನ್ನು ಕೆರೆಕಟ್ಟೆಗಳನ್ನು ಕಟ್ಟುವುದಕ್ಕೆ ಕೊಡಬೇಕಾಗಿರುವ ಕಡೆ ೧೦ ರೂಪಾಯಿ ವಿಚ್ರ್ಚು ಮಾಡುವುದಕ್ಕೆ ಈ ಸರ್ಕಾರಕ್ಕೆ ಶಕ್ತಿಯಿಲ್ಲ. ಜಿಲ್ಲಾ ಪರಿಷತ್ ಕಛೇರಿಗಳಿಗೆ ಬಿಲ್ಡಿಂಗ್‌ಗಳು ಇಲ್ಲ. ಇದರಿಂದ ಜಿಲ್ಲಾ ಪರಿಷತ್ತಿನಲ್ಲಿ ಯಾವುದೇ ಕಾರ್ಯಕ್ರಮವನ್ನು ಹಾಕಿಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಜಿಲ್ಲಾ ಪರಿಷತ್ತಿನಲ್ಲಿ ಹೇಳಿದರೆ ಅವರು ಸರ್ಕಾರದಿಂದ ದುಡ್ಡು ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ. ಸರ್ಕಾರವನ್ನು ಕೇಳಿದರೆ ಅವರು ಮಂತ್ರಿಗಳ ಕಡೆಗೆ ಕೈತೋರಿಸುತ್ತಾರೆ. ಮಂತ್ರಿಗಳು ಮತ್ತೆ ಜಿಲ್ಲಾ ಪರಿಷತ್ತಿಗೆ ಹೇಳುತ್ತಾರೆ ಈ ರೀತಿಯಾಗಿ,ಕೆಲವರ ಮನಸ್ಸಿನಲ್ಲಿ ಅಲ್ಲೋಲ ಕಲ್ಲೋಲ ಮಾಡಿ ಪರಿಸ್ಥಿತಿಯನ್ನು ಇಟ್ಟಿದ್ದಾರೆ. ಅಧ್ಯಕ್ಷರೇ, ಯಾವ ಯೋಜನೆಯೂ ಕಾರ್ಯಗತವಾಗುತ್ತಿಲ್ಲ ಎನ್ನುವುದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಕೊಡಗಿನಲ್ಲಿ ಟೀ ಯೋಜನೆಯನ್ನು ಏಳೆಂಟು ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದಾರೆ. ಅದಕ್ಕೆ ಈ ಸರ್ಕಾರದಿಂದ ಇವೊತ್ತು ಒಂದು ಗವರ್ನಮೆಂಟ್ ಆರ್ಡರ್ ಅನ್ನು ಹೊರಡಿಸುವುದಕ್ಕೆ ಆಗಿಲ್ಲ. ಕ್ಯಾಬಿನೆಟ್‌ನಲ್ಲಿ ಇದು ಪಾಸ್ ಆಗಿ ಮೂರು ವರ್ಷ ಆಗಿದೆ. ಆದರೆ. ಸರ್ಕಾರಿ ಆಜ್ಞೆ ಮಾತ್ರ ಆಗಿಲ್ಲ. ಇದರಿಂದಾಗಿ ಟೀ ಯೋಜನೆ ಹಾಳಾಗುತ್ತಿದೆ. ಇದನ್ನು ಮುಂದುವರಿಸಿಕೊಂಡು ಹೋಗಬೇಕೆಂದು ಹೇಳುತ್ತೇನೆ ಮತ್ತು ಇದರ ಬಗ್ಗೆ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರೇ, ಇನ್ನು ಕರ್ನಾಟಕದಲ್ಲಿ ಡಕಾಯಿತಿ ಪ್ರಕರಣಗಳು ಜಾಸ್ತಿಯಾಗಿವೆ, ಬಹಳಷ್ಟು ನಡೆದಿದೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಈ ಸಂಬಂಧವಾಗಿ ಒಂದು ಉದಾಹರಣೆಯನ್ನು ಕೊಡುವುದಾದರೆ ಕೊಡಗಿನಲ್ಲಿ ಗಾಳಿಬೀಡು ಅಂಟಿ ಎಂದು ಒಬ್ಬರನ್ನು ಹಿಡಿದ್ದಾರೆ. ಆದರೆ ಈ ಅಂಟಿ ಮೇಲೆ ಯಾವ ಕ್ರಮವನ್ನು ತೆಗೆದುಕೊಂಡಿದ್ದೇವೆ ಎಂದು ಹೇಳಿಲ್ಲ. ಈ ಗಾಳಿಬೀಡು ಅಂಟಿಗೆ ನಾಲ್ಕು ಬ್ಯಾಥಲ್ ಹೌಸ್‌ಗಳು ಇವೆ. ಇದನ್ನು ಸಮೇತ ಅಕ್ವೈರ್ ಮಾಡಿ ಇನ್ವೆಸ್ಟಿಗೇಶನ್ ಮಾಡಿಲ್ಲ. ಯಾರಾದರೂ ಅಧಿಕಾರಿಗಳು ಅಲ್ಲಿ ರೇಡ್ ಮಾಡುವುದಕ್ಕೆ ಹೋದರೆ ಈ ಅಂಟಿ ಹೇಳುತ್ತಾರೆ, ಇವರು ಸಹ ನಮ್ಮ ಮನೆಗೆ ಬಂದಿದ್ದರು ಎಂದು, ಇಂತಹ ಪರಿಸ್ಥಿತಿಯಲ್ಲಿ ಸರಿಯಾದ ರೀತಿಯಲ್ಲಿ ಈ ಅಂಟಿ ಏನು ಬ್ಯಾಥಲ್ ಹೌಸ್‌ಗಳನ್ನು ನಡೆಸುತ್ತಿದ್ದಾಳೆ ಅಲ್ಲಿಗೂ ಹೋಗಿ ಹಿಡಿಯುತ್ತಿಲ್ಲ. ಅಲ್ಲಿ ಹೋದರೂ ಯಾರನ್ನೂ ಹಿಡಿಯುತ್ತಿಲ್ಲ ಎಂದರೆ ಇವರು ಅಕೆಯನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ ಎಂದು ಹೇಳಬೇಕಾಗುತ್ತದೆ. ಮೊನ್ನೆ ಡಕಾಯಿತಿ ಮಾಡಿದ ಮೂರು ಜನರನ್ನು ಹಿಡಿದರು. ಅವರು ಅಂಟಿ ಮನೆ ಎಂದು ಹೇಳಿದರಂ. ಆದರೂ ಅವರ ಮೇಲೆ ಯಾವ ಚಾರ್ಜನ್ನೂ ಮಾಡಿಲ್ಲ. ಆಕೆಯನ್ನು ಜಿಲ್ಲೆಯಿಂದಲೇ ಗಡೀಪಾರು ಮಾಡಬಹುದಿತ್ತು, ಈ ಬ್ಯಾಥಲ್ ಹೌಸ್‌ಗಳನ್ನು ಧ್ವಂಸ ಮಾಡಬಹುದಿತ್ತು. ಆದರೆ ಅದನ್ನು ಮಾಡುವುದಕ್ಕೆ ಹೋಗಿಲ್ಲ. ಡಿಪಾರ್ಟ್‌ಮೆಂಟಿನವರಿದ್ದು ಕೈವಾಡ ಇದರಲ್ಲಿ ಇರಬಹುದೆಂದು ಅನುಮಾನವೂ ನಮಗೆ ಬರುತ್ತದೆ. ಇಂತಹ ಬಹಳಷ್ಟು ಉದಾಹರಣೆಗಳನ್ನು ನಾವು ಕೊಡಬಹುದು.

ಅಧ್ಯಕ್ಷರೇ. ಬಹಳಷ್ಟು ಕಡೆ ಖಾಲೀ ಇರುವ ಹುದ್ದೆಗಳಿಗೆ ಅಪಾಯಿಂಟ್‌ಮೆಂಟ್ ಮಾಡುತ್ತೇವೆ ಎಂದು ಹೇಳಿದರು. ಎಲ್ಲಾ ಡಿಪಾರ್ಟ್‌ಮೆಂಟ್‌ಗಳಿಂದಲೂ ಇಂಟರ್‌ವ್ಯೂ ಕಾರ್ಡ್ ಕಳಿಸುತ್ತಾರೆ

ಅಭ್ಯರ್ಥಿಗಳು ಇಂಟರ್‌ವ್ಯೂಗೆ ಬಂದುಹೋದ ನಂತರ ಅದನ್ನು ಕ್ಯಾನ್ಸಲ್ ಮಾಡುತ್ತಾರೆ ಬಡಪಟ್ಟಿ ಕಡೆ ಹೀಗೆಯೇ ನಡೆದಿದೆ. ಇದರಿಂದ ಸರ್ಕಾರದ ಕೆಲಸಕಾರ್ಯಗಳು ಆಗುತ್ತಿಲ್ಲ ಮತ್ತು ಜನರಿಗೆ ಕೆಲಸ ಸಿಗುತ್ತಿಲ್ಲ. ಅನ್‌ಎಂಪ್ಲಾಯ್‌ಮೆಂಟ್ ಜಾಸ್ತಿಯಾಗುತ್ತಿದೆ ಸರ್ಕಾರದಲ್ಲಿ ಇಪತ್ತು ೭೦-೮೦ ಸಾವಿರ ಹುದ್ದೆಗಳು ಖಾಲಿ ಇವೆ. ಇವುಗಳನ್ನು ಭರ್ತಿ ಮಾಡಿದರೆ ಎಷ್ಟೋ ಜನರಿಗೆ ಕೆಲಸ ಸಿಕ್ಕಿದಂತಾಗುತ್ತದೆ. ಅದನ್ನು ಇವರು ಭರ್ತಿ ಮಾಡುತ್ತಿಲ್ಲ. ಇದು ಒಹಳ ಅನ್ಯಾಯ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ.

ಈಗ ವೇಕೆಂಟ್ ಲ್ಯಾಂಡ್‌ಗೆ ಟ್ಯಾಕ್ಸ್ ಹಾಕತಕ್ಕಂಥ ಪ್ರಪೋಸಲ್ ಅನ್ನು ಸರ್ಕಾರದವರು ಮಂಡಿಸಿದ್ದಾರೆ. ವೇಕೆಂಟ್ ಲ್ಯಾಂಡ್‌ಗೆ ಟ್ಯಾಕ್ಸ್ ಹಾಕುವ ಅವಶ್ಯಕತೆ ಏನು ? ನಾನು ಕೇಳುತ್ತಿದ್ದೇನೆ, ಅರ್ಬನ್ ಲ್ಯಾಂಡ್ ಸೀಲಿಂಗ್ ಆದಮೇಲೆ, ಅದರ ಪ್ರಕಾರ ಟ್ಯಾಕ್ಸ್ ವಸೂಲಿ ಮಾಡಿದರೆ ಸಾಕು, ಇಷ್ಟೇ ಅಲ್ಲ, ಲೆವ್ಡಿಂಗ್ ಟ್ಯಾಕ್ಸ್ ವಸೂಲಿ ಮಾಡಿದರೆ ಸಾಕು. ಆಮೇಲೆ ವೇಕೆಂಟ್ ಲ್ಯಾಂಡ್ ಎಂದರೆ ಏನು ? ಒಂದು ಜಾಗದಲ್ಲಿ ಮನೆ ಇರುತ್ತದೆ ಆ ಮನೆಯ ಸುತ್ತ ಅರ್ಧ ಎಕರೆ ಜಾಗ ಇರುತ್ತದೆ. Whether this applices to such land or only to the land which has no building ? This to be clarified. ಏಕೆಂದರೆ ಒಂದು ಮನೆಯ ಸುತ್ತ ಸ್ವಲ್ಪ ಜಾಗ ಇದ್ದರೆ ಅದನ್ನು ವೇಕೆಂಟ್ ಲ್ಯಾಂಡ್ ಎಂದು ಮಾಡಿದರೆ ಬಹಳಷ್ಟು ಜನರಿಗೆ ತೊಂದರೆ ಯಾಗುತ್ತದೆ ಎಂದು ಹೇಳುವುದಕ್ಕೆ ನಾನು ಬಯಸುತ್ತೇನೆ.

ಅಧ್ಯಕ್ಷರು.— ಆರು ನಿಮಿಷ ಆಗಿದೆ, ತಾವು ಮುಕ್ತಾಯ ಮಾಡಿರಿ.

ಶ್ರೀ ಡಿ. ಎ. ಚಿನ್ನಪ್ಪ — ಇನ್ನೂ ಒಂದು ನಿಮಿಷ ಅವಕಾಶ ಕೊಡಿ ಸ್ವಾಮಿ. Regarding Goods proposed for taxation i.e. sales tax ಹೇಳುವುದಾದರೆ ಪೆಟ್ರೋಲ್ ಇದೆ ಬಡವರಿಗೆ ಬೇಕಾಗಿಲ್ಲ. ಕಾರುಗಳನ್ನು ನಡೆಸತಕ್ಕವರು ಐಶ್ವರ್ಯವಂತರು. ಅದರ ಟ್ಯಾಕ್ಸ್‌ನ್ನು ಕಡಿಮೆ ಮಾಡಿದ್ದಾರೆ. ಹಾಗೆಯೇ ಚಿಕೋರಿ. ಇದನ್ನು ಕುಡಿಯುವವರು ಬಡವರಲ್ಲ. ಆದಕ್ಕೆ ತೆರಿಗೆಯನ್ನು ಕಡಿಮೆ ಮಾಡಿದ್ದಾರೆ. ಎಲೆಕ್ಟ್ರಿಕ್ ಗೂಡ್ಸ್ ಉಪಯೋಗ ಮಾಡತಕ್ಕಂಥವರು ಹೆಚ್ಚಾಗಿ ಶ್ರೀಮಂತರು, ಬಡವರು, ಹರಿಜನ ಗಿರಿಜನರು ಇದನ್ನು ಉಪಯೋಗ ಮಾಡುವುದಿಲ್ಲ. ಇನ್ನು ಟೆಲಿಫೋನ್ ಅನ್ನು ಯಾರು ಸ್ವಾಮಿ ಉಪಯೋಗ ಮಾಡತಕ್ಕಂಥವರು ? ದುಡ್ಡು ಇರತಕ್ಕಂಥವರು ಐಶ್ವರ್ಯವಂತರು ಇವುಗಳನ್ನು ಉಪಯೋಗಿಸುವುದು. ಇದಕ್ಕೆ ಸಮೇತ ತೆರಿಗೆಯನ್ನು ಕಡಿಮೆ ಮಾಡಿದ್ದಾರೆ ವೇಶಿನ್ ಟೂಲ್ಸ್, ಆಟೋಮೊಬೈಲ್ ಪಾರ್ಟ್ಸ್ ಇದು ಸಮೇತ ಐಶ್ವರ್ಯವಂತರು ಉಪಯೋಗ ಮಾಡತಕ್ಕಂಥದ್ದು. ಇದು ಕೂಡ ಸರಿಯಲ್ಲ. ಇನ್ನೂ ಹೇಳಬೇಕಾದದ್ದು ಬಹಳಷ್ಟು ಇದೆ. ಆದ್ದರಿಂದ ಇಷ್ಟು ಮಾತ್ರ ಹೇಳಿ ಈ ಬಜೆಟ್ ಟೊಳ್ಳು ಬಜೆಟ್ ಇದೆ, ಇದರಲ್ಲಿ ಏನೂ ಇಲ್ಲ. ಇದು ಜನರನ್ನು ಮೋಸ ಗೊಳಿಸತಕ್ಕಂಥಾದ್ದು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

11-00 A. M.

SMT. MUKTHARUNNISA (Chamarajanagar).—Mr. Speaker, first of all I thank you for the opportunity given to me. I am un happy that the budget is for a period of 3 months ending June 1988, presented by the Hon. Chief Minister of Karnataka. In this connection I quote para 3 of the budget speech.

> "While we have the satisfaction that there has been alround development of the State....."

Is it an achievement ? When we are outside, we are attacked, our farm houses are attacked. Every time, it is appearing in the Papers. That some houses are looted. Is it an achievement ? Seconds every where kind Sathya graha is going on. on the question of regularisation of local candidates and unemployment problem

Everywhere satyagraha and vulgar languages are used against Ministers. Is it an achievement ? How far the unemployment problem is solved ? It is not mentioned in the budget. Has the Government implemented one job for one family as per the electoral promises ? They have mentioned that they had fulfilled all the promises. If they have implemented, how many unemployed people are benefitted. If it is very difficult to explain, at least let me know how many unemployed are there waiting for jobs in Karnataka. I can say that many industries have locked out in the entire Karnataka in various regions. How many cooperative sector industries sold to private sector ? How many employed workers rendered unemployed ? Is it an achievement ? Even they have stopped production in the Mysore Sandal Wood Oil Factory, which is world famous, I am sorry to say that they have terminated many workers, Is it the justice given to women folk ? First they terminated the lady workers. Still some workers are there. I think they mayalso be terminated and Sandal Oil factory will be closed shortly. This is the situation prevaling in the Industrial region. I would like to say a few words on women. I am deeply pained that women are neglected. Though seperate department is there Directorate of Women Welfare and a Minister is appointed, though women are more in population wise, no measures, have taken up for their welfare. Only Thali Bhagya was there in the last budget. Now they have said that that scheme is a failure. Very good, it has failed but I would like to ask, what is the measure they have taken for women folk. What is the achievement ? I would now refer to the Governor's Address, para 23 wherein it is mentioned that women agricultural labourers during their advanced period of preganoy, an advance amount has been given to them as they undergo hardship during that time. When they are pregnant they will not get anything. Only at the time of advanced pregnancy. Is it an achievement ? And it is mentioned in the Governor's Address. Only when they are in advanced stage. they will be given this advance amount. Otherwise nil. If they are completely sick also, no allowance, No permanent measures taken to remove the hardship. Last year they have said about Thali Bhagya and this year they said that, allowances are given to the poor. What is the allowance ? What is the benefit they are going to give ? There is another thing I would like to ask. In the Governor's Address they have mentioned 1.47 lakh widows are getting the widow pension, and are living in dignity. Did those widows live before getting your widows. pension without dignity ? Why you used there the word 'dignity' ? Comfortably or happily or satisfactorily, you could have said, To live with dignity,

do they need Rs. 50/-? How it is mentioned like this ? And what about the unemployment in women ? There is encrochment from men in the fields of social welfare schemes, educational schemes, in technical fields, commercial fields, voluntary organisations, co-operative fields, industrial fields and administrative fields and last in political field also. For example your Government is having 35 Ministers and you have given only one ministership to a Lady. Recently, for Rajya Sabha elections out of 3 seats you could have given one to a Lady About dowry victims, every day we see in the newspapers that courts for women are going to be set up, to avoid this cruelty and get justice. Every day different stories have come about dowry victims in newspapers. I request that this should be set up only for submitting their grievances and getting justice. Then, just for the sake of revenue I have mentioned this many times but no action is taken, the Corporation authorities every where in Karnataka are facing half naked women posters on all important places. Is it an achievement ? The public used to peep and laugh Is it the way to lose their dignity ? Why not you stop. Then, whenever stories appear in newspapers about dacoits, when we ask Police Department, it is so difficult for them to send a Van. There is no money for diesel. When I was arrested also I heard in wireless that DIG or somebody were asking the SP to use their own money for diesel and arrest the people. In the department if there is no money for the diseal what about partrolling in the night time when the dacoits are attacking in Karnataka ?

Now, as regards child, child is innocent and dependent. But, I will ask whether it is an achievement to encourage child labour in factories for the facilities of capitalists, They pay half-wages to the child, This is the facility for the owners. They have not taken any measure to prevent this cruelty in connection with the development of the children welfare.

About minority, I am very much surprised to see in budget that not a single word has been mentioned about the minority, about the minority language and about the Minority development Corporation. They had not sanctioned the grant to the Minority Development Corporation. About 3 years back they have sanctioned Rs. 1 crore and God only knows what happened to that Rs. 1 crore also. They have omitted the name of the Minority. They had mentioned in the Governor's address about the Urdu Academy and the budget was only Rs. 1 lakh. They have not given it to Urdu Academy. That means they have not safeguarded the language also and they have not safeguarded the Minorities Development Corporation also.

Mass communication is a new subject in the budget, I am surprised to see that mas communication is a failure, in Karnataka, though the Indian technologists are coming forward to start factories in Karnataka. The latest technology for the facilities of mass communication is PABX, computer, etc., But the Government is not encouraging it and teaching of the masscommunication. You can see legislator's phone as an example. You cannot make phone calls Even, your phone is also out of order. Everybody knows that mass communication is a failure. They should encourage the latest technology in Karnataka and mass communication should be improved. They had mentioned only one sentence about the mass communication in the budget. But, I do not know how far it is successful. But, anyhow I am happy that there are Indian technologists. They should encourage Indian technologists. With this I conclude my speech. Thank you very much.

† ಶ್ರೀ ಕೆ. ಮಲ್ಲಪ್ಪ (ಮಾಯಕೊಂಡ).— ಮಾನ್ಯ ಅಧ್ಯಕ್ಷರೇ ೧೯೮೮-೮೯ನೇ ಸಾಲಿನ ಆಯ-ವ್ಯಯವನ್ನು ಬೆಂಬಲಿಸುತ್ತಾ ಈ ಸಂದರ್ಭದಲ್ಲಿ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ೧೯೮೮-೮೯ನೇ ಸಾಲಿನಲ್ಲಿ ಸರ್ಕಾರ ಹಲವಾರು ಹೊಸ ಯೋಜನೆಗಳನ್ನು ಹಾಕಿರುವ ಮೂಲಕ ರಾಜ್ಯ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಮತ್ತು ಸಾಮಾಜಿಕವಾಗಿ ಸಾರ್ವತ್ರಿಕವಾಗಿ ಯೋಜನೆಗಳನ್ನು ರೂಪಿಸಿಕೊಂಡು ತ್ವರಿತಗತಿಯಲ್ಲಿ ಅವುಗಳನ್ನು ಜಾರಿ ಮಾಡಬೇಕೆಂದು ನಾನು ಆಸೆ ವ್ಯಕ್ತಪಡಿಸುತ್ತೇನೆ. ಸರ್ಕಾರ ಕೆಲವು ಹೊಸಯೋಜನೆಗಳನ್ನು ಹಾಕಿಕೊಂಡಿದೆ ಅ ಬಗ್ಗೆ ನಮಗೆ ತಿಳಿದಿರಕ್ಕಂಥ ಕೆಲವು ಸಲಹೆ ಮತ್ತು ಸೂಚನೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಮತ್ತು ಅವುಗಳನ್ನು ಕಾರ್ಯಗತ ಮಾಡಬೇಕೆಂದು ಸಹ ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ. ಇವತ್ತು ಬಹಳ ಪಂಖ್ಯೆವಾಗಿ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ರೈತರು ಹೈನು ಅಭಿವೃದ್ಧಿ ದೃಷ್ಟಿಯಿಂದ ಐ.ಆರ್.ಡಿ.ಪಿ. ಯೋಜನೆಯಡಿಯಲ್ಲಿ ದನಕರುಗಳನ್ನು ತೆಗೆದುಕೊಂಡಿರುತ್ತಾರೆ. ಆ ದನಕರುಗಳಿಗೆ ಏನಾದರೂ ಚಿಕಿತ್ಸೆ ಕೊಡಿಸಬೇಕೆನ್ನುವ ಸಂದರ್ಭ ಬಂದಾಗ ಗ್ರಾಮಾಂತರ ಪ್ರದೇಶಗಳಲ್ಲಿ ಪಶುಗಳ ಚಿಕಿತ್ಸೆಗೆ ಕೊರತೆ ಇರುವುದರಿಂದ ನಮ್ಮ ಸರ್ಕಾರದವರು ರೈತರ ಹಿತದೃಷ್ಟಿಯಿಂದ ಚಿಕಿತ್ಸಾಲಯಗಳನ್ನು ಗ್ರಾಮಾಂತರಗಳಲ್ಲಿ ಪ್ರಾರಂಭಿಸಬೇಕಾಗಿದೆ. ಈ ವರ್ಷ ನಮ್ಮ ಸರ್ಕಾರದವರು ನೂರಾರು ಪಶುಚಿಕಿತ್ಸಾಲಯಗಳನ್ನು ತೆರೆದು ದನಕರುಗಳಿಗೆ ಸಹಾಯ ಮಾಡಬೇಕು ಮತ್ತು ರೈತರಿಗೆ ಸಹಾಯ ಮಾಡಬೇಕು. ಹೈನು ಅಭಿವೃದ್ಧಿಪಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಜನತೆಗೆ ವೈದ್ಯಕೀಯ ನೆರವನ್ನು ಕೊಡುವ ದೃಷ್ಟಿಯಿಂದ ಆರೋಗ್ಯ ಘಟಕಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಾರಂಭಿಸಬೇಕಾಗಿದೆ. ಮತ್ತೆ, ಗ್ರಾಮೀಣ ಪ್ರದೇಶದ ಮಕ್ಕಳ ಹಿತ ದೃಷ್ಟಿಯಿಂದ ಶೈಕ್ಷಣಿಕ ಕ್ಷೇತ್ರದಲ್ಲಿ, ೧೯೮೩ನೇ ಇಸವಿಯಲ್ಲಿ ಜನತಾ ಪಕ್ಷದ ಸರ್ಕಾರದ ಅಧಿಕಾರಕ್ಕೆ ಬಂದಮೇಲೆ ರಾಜ್ಯಾದ್ಯಂತ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಗ್ರಾಮೀಣ ಪ್ರದೇಶಗಳಲ್ಲಿ ಬಹಳಷ್ಟು ಕಡೆ ಹೈಸ್ಕೂಲುಗಳನ್ನು, ಕಿರಿಯ ಕಾಲೇಜುಗಳನ್ನು ಪ್ರಾರಂಭಿಸಲಾಗಿದೆ. ಆದರೆ, ಕಳೆದ ಎರಡು ವರ್ಷಗಳಿಂದ ರಾಜ್ಯದಲ್ಲಿ ಯಾವ ಕಡೆಗೂ ಹೈಸ್ಕೂಲುಗಳಾಗಿಲೀ, ಕಿರಿಯ ಕಾಲೇಜುಗಳಾಗಲೀ ಪ್ರಾರಂಭವಾಗಿಲ್ಲ. ೧೯೮೮-೮೯ನೇ ಸಾಲಿನಲ್ಲಿ ಗ್ರಾಮಾಂತರ ಪ್ರದೇಶದ ಹೆಣ್ಣು ಮಕ್ಕಳ ಹಿತ ದೃಷ್ಟಿಯಿಂದ ಹೈಸ್ಕೂಲುಗಳನ್ನು ಮತ್ತು ಕಿರಿಯ ಕಾಲೇಜುಗಳನ್ನು ಪ್ರಾರಂಭಿಸುವುದರ ಮೂಲಕ ಶೈಕ್ಷಣಿಕ ವಾತಾವರಣವನ್ನು ಹೆಚ್ಚಿಸಬೇಕು. ನಮ್ಮ ರಾಜ್ಯದಲ್ಲಿರುವ ಹೆಣ್ಣು ಮಕ್ಕಳಿಗೆ ಶೈಕ್ಷಣಿಕವಾಗಿ ಹೆಚ್ಚು ಸವಲತ್ತನ್ನು ಮಾಡಿಕೊಡಬೇಕೆಂದು ಸರ್ಕಾರವನ್ನು ತಮ್ಮ ಮೂಲಕ ನಾನು ಕೋರಿಕೊಳ್ಳುತ್ತೇನೆ. ನನ್ನ ಕ್ಷೇತ್ರವಾದ ಮಾಯಕೊಂಡದಲ್ಲಿ ಪದವಿಪೂರ್ವ ಕಾಲೇಜನ್ನು ಪ್ರಾರಂಭ ಮಾಡುವುದಕ್ಕೆ ೧೯೮೬-೮೭ರಲ್ಲಿ ಸರ್ಕಾರವು ಮಂಜೂರಾತಿ ಕೊಟ್ಟಿತ್ತು. ಕಾರಣಾಂತರದಿಂದ ಈ ಕಾಲೇಜಿನ ಕೆಲಸವನ್ನು ಸ್ಥಗಿತಗೊಳಿಸಲಾಗಿದೆ. ಆದುದರಿಂದ ನಾನು ಕೇಳಿಕೊಳ್ಳುವುದೇನೆಂದರೆ, ೧೯೮೭-೮೭ರಲ್ಲಿ ಪದವಿಪೂರ್ವ

ಕಾಲೇಜನ್ನು ಪ್ರಾರಂಭಿಸುವುದಕ್ಕೆ ಸರ್ಕಾರ ಏನು ಮಾಡುತ್ತಿದೆ ಎಂಬುದನ್ನು ತಿಳಿಸಬೇಕೆಂದು ಕೋರುತ್ತೇನೆ. ಆ ಕೆಲಸವನ್ನು ೧೯೪೮-೪೯ರ ಯೋಜನೆಯಲ್ಲಿ ಸೇರಿಸಿ ಕಾಲೇಜಿನ ಕೆಲಸವನ್ನು ಪೂರ್ತಿ ಮಾಡಿಸಿಕೊಡಬೇಕೆಂದು ಸಭಾನಾಯಕರಲ್ಲಿ ತಮ್ಮ ಮುಖಾಂತರ ಒತ್ತಾಯ ಪೂರ್ವಕವಾಗಿ ಕೋರಿಕೊಳ್ಳುತ್ತೇನೆ ಮತ್ತೆ ಅತಿ ಮುಖ್ಯವಾದ ದೇಶದ ಹಿತ ದೃಷ್ಟಿಯಿಂದ, ರೈತರ ಹಿತದೃಷ್ಟಿಯಿಂದ ಗ್ರಾಮಾಭಿವೃದ್ಧಿ ಪ್ರದೇಶದ ಕೃಷಿ ಕಾರ್ಮಿಕರ ಹಿತದೃಷ್ಟಿಯಿಂದ ನಾನು ಕೇಳಿಕೊಳ್ಳುವುದೇನೆಂದರೆ, ಇನ್ನು ಮುಂದೆ ರಾಜ್ಯದ ಎಲ್ಲಾ ಕಡೆ ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ರೂಪಿಸಿಕೊಳ್ಳಬೇಕಾಗಿದೆ. ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಕೈಗೊಳ್ಳುವುದಕ್ಕೆ ಪಲವಾರು ತೊಡಕುಗಳು ಬರಬಹುದು. ಆದರೆ ಸಣ್ಣ ನೀರಾವರಿ ಯೋಜನೆಗಳನ್ನು ಕೈಗೊಳ್ಳುವುದಕ್ಕೆ ಯಾವುದೇ ಅಡೆತಡೆಗಳು ಉಂಟಾಗುವುದಿಲ್ಲ. ಕನಿಷ್ಟ ಒಂದು ಸಣ್ಣ ಕೆರೆಯನ್ನು ಕಟ್ಟಿದರೂ ಅದರಿಂದ ನೂರಿನ್ನೂರು ಎಕರೆಗಳಷ್ಟು ಭೂಮಿಯಲ್ಲಿ ವ್ಯವಸಾಯವನ್ನು ಮಾಡಬಹುದು. ಸಣ್ಣ ನೀರಾವರಿ ಯೋಜನೆಗಳನ್ನು ಮಾಡುವುದರಿಂದ ರೈತರ ಆರ್ಥಿಕ ಪರಿಸ್ಥಿತಿ ಉತ್ತಮವಾಗುತ್ತದೆ. ಕೃಷಿ ಕಾರ್ಮಿಕರಿಗೆ ಉದ್ಯೋಗ ಕೊಟ್ಟ ಹಾಗೆ ಆಗುತ್ತದೆ. ದನ-ಕರುಗಳಿಗೆ ಮೇವಿನ ಉತ್ಪಾದನೆಯಾಗುತ್ತದೆ ಅಲ್ಲದೇ ರಾಷ್ಟ್ರೀಯ ಮಟ್ಟದಲ್ಲಿ ಉತ್ಪಾದನೆ ಹೆಚ್ಚಳವಾಗುತ್ತದೆ ಆದುದರಿಂದ ಇನ್ನು ಮುಂದೆ ರಾಜ್ಯದ ಎಲ್ಲಾ ಕಡೆ ಸಣ್ಣಪುಟ್ಟ ನೀರಾವರಿ ಯೋಜನೆಗಳನ್ನು ತ್ವರಿತಗತಿಯಲ್ಲಿ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಪೂರ್ವಕವಾಗಿ ಕೋರಿಕೊಳ್ಳುತ್ತೇನೆ. ಮತ್ತೆ, ನಮ್ಮ ರಾಜ್ಯದಲ್ಲಿ ಪಲವಾರು ನದಿಗಳು ಹುಟ್ಟಿ ಪರಿಯುತ್ತಿವೆ. ಈ ನದಿಗಳಲ್ಲಿ ಸಾಕಷ್ಟು ನೀರಿನ ಸಂಪತ್ತು ಇದೆ. ನದಿಗಳಲ್ಲಿ ಹರಿಯುವ ನೀರನ್ನು ಲಿಫ್ಟ್ ಇರಿಗೇಷನ್ ಮೂಲಕ ನೀರನ್ನು ಉಪಯೋಗಿಸಿಕೊಂಡು ನೀರಾವರಿ ಮಾಡುವುದಕ್ಕೆ ಯೋಜನೆ ಹಾಕಿಕೊಳ್ಳಲಾಗಿತ್ತು. ಇದಕ್ಕೆ ಅನುಕೂಲವಾಗಲೇ ಎಂದೇ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್‌ನ್ನು ಸಹ ರಚನೆ ಮಾಡಲಾಯಿತು. ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಆದ ಮೇಲೆ ಏತ ನೀರಾವರಿ ಬಗ್ಗೆ ಕೆಲಸ ಕಾರ್ಯಗಳು ಸ್ಥಗಿತಗೊಂಡಿವೆ. ಲಿಫ್ಟ್ ಇರಿಗೇಷನ್‌ನಿಂದ ನೀರನ್ನು ಉಪಯೋಗಿಸಿಕೊಂಡು ವ್ಯವಸಾಯ ಮಾಡುವುದಕ್ಕೆ ಅವಕಾಶ ಕೊಟ್ಟರೆ ನಮ್ಮ ರಾಜ್ಯದಲ್ಲಿ ಹೆಚ್ಚಿನ ಉತ್ಪಾದನೆಯಾಗುತ್ತದೆ. ರೈತರಿಗೆ ಇದರಿಂದ ಆರ್ಥಿಕ ಪರಿಸ್ಥಿತಿ ಉತ್ತಮವಾಗುತ್ತದೆ. ಆದ್ದರಿಂದ, ಇನ್ನು ಮುಂದೆ ಲಿಫ್ಟ್ ಇರಿಗೇಷನ್‌ನ್ನು ತ್ವರಿತಗತಿಯಲ್ಲಿ ಕೆಲಸಕಾರ್ಯಗಳನ್ನು ಕೈಗೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೋರಿಕೊಳ್ಳುತ್ತೇನೆ,

ಆಮೇಲೆ ನಗರಪ್ರದೇಶಗಳಲ್ಲಿರುವ ಖಾಲಿ ನಿವೇಶನಗಳ ಮೇಲೆ ಸರ್ಕಾರ ಹೊಸದಾಗಿ ತೆರಿಗೆಯನ್ನು ವಿಧಿಸಿದೆ, ಸರ್ಕಾರದ ಆರ್ಥಿಕ ದೃಷ್ಟಿಯಿಂದ ಸರ್ಕಾರದ ಆದಾಯದ ದೃಷ್ಟಿಯಿಂದ ಈ ಯೋಜನೆ ಮಾಡಿದರೆ, ಸಾಮಾನ್ಯ ಜನರು ಶೋಷಣೆಗೆ ಒಳಗಾಗುತ್ತಾರೆ. ೪೦ × ೩೦ ಅಳತೆಯುಳ್ಳ ಸೈಟನ್ನು ಪಡೆದಿರುವ ಒಬ್ಬ ಸಾಮಾನ್ಯ ಪ್ರಜೆಯು ವರ್ಷಕ್ಕೆ ಸುಮಾರು ೮೦೦ ರೂಪಾಯಿಗಳನ್ನು ತೆರಿಗೆ ರೂಪದಲ್ಲಿ ಸರ್ಕಾರಕ್ಕೆ ಕೊಡಬೇಕಾಗುತ್ತದೆ. ಪ್ರತಿ ವರ್ಷವೂ ೮೦೦ ರೂಪಾಯಿಗಳನ್ನು ಖಾಲಿ ಸೈಟಿನ ಮೇಲೆ ತೆರಿಗೆ ಹಾಕಿದರೆ ಬಡವರಿಗೆ ಬಹಳ ಕಷ್ಟವಾಗುತ್ತದೆ. ಆದುದರಿಂದ, ಈ ಕರವನ್ನು ಕಡಿಮೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೋರಿಕೊಳ್ಳುತ್ತೇನೆ. ಖಾಲಿ ನಿವೇಶನದ ಮೇಲೆ ಹಾಕಿರುವ ತೆರಿಗೆಯನ್ನು ಕಡಿಮೆ ಮಾಡುವುದಕ್ಕೆ ಸರ್ಕಾರ ಪುನರ್‌ಪರಿಶೀಲನೆ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ. ಆಮೇಲೆ ಸರ್ಕಾರದ ಗಮನಕ್ಕೆ ಒಂದು ವಿಷಯವನ್ನು ತರುವುದಕ್ಕೆ ಇಷ್ಟಪಡುತ್ತೇನೆ. ಈ ವರ್ಷ ನಮ್ಮ ರಾಜ್ಯದಲ್ಲಿ ರಾಗಿ ಬೆಳೆದಂಥ ರೈತರುಗಳಿಗೆ ಬಹಳ ತೊಂದರೆಯಾಗಿದೆ, ಎರಡು ತಿಂಗಳ ಹಿಂದೆ ೨೦೦ ರೂಪಾಯಿಗಳಿದ್ದ ರಾಗಿ ಬೆಲೆ ಈಗ ಬಹಳ ಕಡಿಮೆಯಾಗಿದೆ.

ಅಧ್ಯಕ್ಷರೇ, ಎರಡು ತಿಂಗಳ ಹಿಂದೆ ರಾಗಿಯ ಬೆಲೆ ಕ್ವಿಂಟಾಲಿಗೆ ೧೮೦ ರೂಪಾಯಿಂಗಳವರೆಗೆ ಇತ್ತು. ಈಗ ೧೨೮ ರೂಪಾಯಿಗಳಿಗೆ ಇಳಿದು ಬಿಟ್ಟಿದೆ. ಹಾಗೆಯೇ ಬಜಾರ್‌ನಲ್ಲಿ ರಾಗಿಯನ್ನು ಹೆಚ್ಚಾಗಿ ತೆಗೆದುಕೊಳ್ಳುವಂಥ ಸಂದರ್ಭವೂ ಇಲ್ಲ. ಇವತ್ತು ರಾಗಿಯನ್ನು ಬೆಳೆಯಂತಕ್ಕ ರೈತರು ಲಕ್ಷಾಂತರ ಸಂಖ್ಯೆಯಲ್ಲಿದ್ದಾರೆ. ಹಿಂದೆ ಇಂತಹದೇ ಸಂದರ್ಭದಲ್ಲಿ ಸರಕಾರದವರು ಬೆಂಬಲ ಬೆಲೆಯನ್ನು ಕೊಟ್ಟು ರೈತರ ರಕ್ಷಣೆ ಮಾಡಿದ್ದರು. ಈ ರೀತಿಯಲ್ಲಿ ನಷ್ಟಕ್ಕೆ ಒಳಗಾಗತಕ್ಕಂಥ ರೈತರನ್ನು ರಕ್ಷಣೆ ಮಾಡಿತ್ತು ಆದುದರಿಂದ ಈಗ ತಡಮಾಡದೇ ಈ ದಿವಸವೇ ಒಂದು ಆದೇಶವನ್ನು ಹೊರಡಿಸುವುದರ ಮೂಲಕ ರೈತರಿಗಾಗುತ್ತಿರುವ ಈ ನಷ್ಟವನ್ನು ತಡೆಗಟ್ಟುವುದಕ್ಕೋಸ್ಕರವಾಗಿ ಒಂದು ಬೆಂಬಲ ಬೆಲೆಯನ್ನು ಕೊಟ್ಟು ಅವರ ರಕ್ಷಣೆಗೆ ಮುಂದೆ ಬರಬೇಕಾದುದು ಅತ್ಯಾವಶ್ಯಕವಾಗಿದೆ. ಇಲ್ಲದಿದ್ದರೆ ರೈತರು ಭಾರಿ ನಷ್ಟಕ್ಕೆ, ಕಷ್ಟಕ್ಕೆ

ಗುರಿಯಾಗುತ್ತಾರೆ. ಈ ತೊಂದರೆಗೆ ಒಳಗಾದ ರೈತರ ರಕ್ಷಣೆ ಕೊಡಬೇಕೆಂದು ಅಂತಹ ಒಂದು ರಕ್ಷಣೆಯನ್ನು ತ್ವರಿತವಾಗಿ ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ನನಗೆ ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟ ತಮಗೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಈ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.— ಇಲ್ಲಿಗೆ ಚರ್ಚೆ ಮುಕ್ತಾಯ ಆಯಿತು. ಈಗ ಮುಖ್ಯಮಂತ್ರಿಗಳಿಂದ ಉತ್ತರ.

೧೯೮೮-೮೯ರ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆಗೆ ಮುಖ್ಯಮಂತ್ರಿಯವರಿಂದ ಉತ್ತರ

† ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).— ಸನ್ಮಾನ್ಯ ಅಧ್ಯಕ್ಷರೆ, ಕಳೆದ ಐದು ದಿನಗಳಿಂದ ನಾನು ಈ ಸಭೆಯ ಮುಂದೆ ಮಂಡಿಸಿದ ೧೯೮೮-೮೯ನೇ ಸಾಲಿಗೆ ಸಂಬಂಧಪಟ್ಟ ಬಜೆಟ್ ಮೇಲೆ, ಈ ಮನೆಯ ಅನೇಕ ಮಾನ್ಯ ಸದಸ್ಯರು ಚರ್ಚೆ ಮಾಡಿದ್ದಾರೆ. ಅನೇಕ ಸೂಚನೆಗಳನ್ನು ಸಲಹೆಗಳನ್ನು ಕೊಟ್ಟಿದ್ದಾರೆ. ಅನೇಕ ಟೀಕೆಗಳನ್ನು ಮಾಡಿದ್ದಾರೆ, ಅವೆಲ್ಲವನ್ನೂ ನಾನು ಸ್ವಾಗತ ಮಾಡುತ್ತೇನೆ.

ಈ ಸಲದ ಬಜೆಟ್ ಚರ್ಚೆಯಲ್ಲಿ ಸಾಮಾನ್ಯವಾಗಿ ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿಯ ಬಗ್ಗೆ ಮತ್ತು ಅಭಿವೃದ್ಧಿಯ ಗತಿಯ ಬಗ್ಗೆ, ಅನೇಕ ಮಾನ್ಯ ಸದಸ್ಯರು ತಮ್ಮ ಚಿಂತೆಯನ್ನು ವ್ಯಕ್ತ ಮಾಡಿದ್ದಾರೆ. ಆ ರೀತಿಯಲ್ಲಿ ಚಿಂತೆಯನ್ನು ವ್ಯಕ್ತ ಪಡಿಸಿರುವುದು ಇಂದಿನ ಪರಿಸ್ಥಿತಿಯಲ್ಲಿ ಸ್ವಾಭಾವಿಕ ಎಂದು ನಾನು ಭಾವಿಸಿದ್ದೇನೆ. ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿಯು ಅಷ್ಟು ತೃಪ್ತಿಕರವಾಗಿಲ್ಲ ಮಷ್ಟೇ ಅಲ್ಲ, ಸ್ವಲ್ಪ ಮಟ್ಟಿಗೆ ಚಿಂತಾಜನಕವಾಗಿದೆ ಎಂದು ಹೇಳಿದರೂ ಕೂಡ ತಪ್ಪಾಗಲಾರದು.

ನಾನು ಚಿಂತಾಜನಕ ಎಂಡು ಹೇಳುತಕ್ಕಂಥ ಶಬ್ದವನ್ನು ಯಾವ ಅರ್ಥದಲ್ಲಿ ಉಪಯೋಗಿಸುತ್ತಾ ಇದ್ದೇನೆ ಎಂದರೆ, ಬೆಳವಣಿಗೆ ಅಥವಾ ಅಭಿವೃದ್ಧಿಯ ವ್ಯಾಪಕತೆ ಮತ್ತು ಅಭಿವೃದ್ಧಿಯ ಗತಿಯಂತ ಅವುಗಳ ಮೇಲೆ ದುಷ್ಪರಿಣಾಮ ಮತ್ತು ಅನಾನುಕೂಲವಾದಂಥ ಪರಿಣಾಮ, ಇಂದಿನ ಆರ್ಥಿಕ ಪರಿಸ್ಥಿತಿ ಉಂಟು ಮಾಡುತ್ತದೆ ಎನ್ನತಕ್ಕಂಥ ಅರ್ಥದಲ್ಲಿ ಚಿಂತಾಜನಕ ಎಂಬ ಶಬ್ದವನ್ನು ಉಪಯೋಗಿಸಿದ್ದೇನೆ.

ನನ್ನ ಭಾಷಣದಲ್ಲಿ ಹೇಳಿದಂತೆ ರಾಜ್ಯದ ನಮ್ಮ ಆರ್ಥ ಪರಿಸ್ಥಿತಿ ವಿಚಾರದಲ್ಲಿ ಸರ್ಕಾರ ಯಾವುದೇ ಆಂಶವನ್ನೂ ಅಡಗಿಸಿರತಕ್ಕಂಥ ಅಗತ್ಯವಿಲ್ಲ, ಮತ್ತು ಅಡಗಿಸಿಡತಕ್ಕಂಥದ್ದು ಸರಿಯೂ ಅಲ್ಲ ಕಳೆದ ಒಂದು ವರ್ಷದ ಅವಧಿಯಲ್ಲಿಯೂ ರಾಜ್ಯದ ಹಣಕಾಸಿನ ಪರಿಸ್ಥಿತಿಯ ವಿಚಾರದಲ್ಲಿ ಎರಡಂ ಪುಸ್ತಕಗಳನ್ನು ನಾವು ಹೊರಡಿಸಿದ್ದೇವೆ. ಅದರಲ್ಲಿ ಇಂದಿನ ರಾಜ್ಯದ ಹಣಕಾಸಿನ ಮುಗ್ಗಟ್ಟಿನ ಪರಿಸ್ಥಿತಿಗೆ ಕಾರಣ ಏನು ಮತ್ತು ಅದನ್ನು ಎದುರಿಸಲು ಯಾವ ಯಾವ ಕ್ರಮಗಳನ್ನು ತೆಗೆದುಕೊಂಡಿದ್ದೇವೆ ಹಣಕಾಸಿನ ಪರಿಸ್ಥಿತಿ ಪರಿಣಾಮ ಅಭಿವೃದ್ಧಿಯ ಮೇಲೆ ಎಷ್ಟರಮಟ್ಟಿಗೆ ಅನುಕೂಲವಾಗಿ ಇದೆ ಅಥವಾ ಅನಾನುಕೂಲವಾಗಿ ಇದೆ ಈ ಎಲ್ಲಾ ವಿಚಾರದಲ್ಲಿ ಸ್ಪಷ್ಟವಾದ ಬೆಳಕಂ ಬೀರುವ ರೀತಿಯಲ್ಲಿ ಈ ಎರಡು ಪುಸ್ತಕಗಳಲ್ಲಿ ನಾವು ವಿವರವನ್ನು ಕೊಟ್ಟಿದ್ದೇವೆ. ನನ್ನ ಭಾಷಣದಲ್ಲಿ ಕೂಡ ಹೇಳಿದ್ದೇನೆ. ನಮ್ಮ ಆರ್ಥಿಕ ಮುಗ್ಗಟ್ಟಿಗೆ ಅಥವಾ ಇಂದಿನ ಆರ್ಥಿಕ ಪರಿಸ್ಥಿತಿಗೆ ಅನೇಕ ಕಾರಣಗಳು ಇವೆ. ಆ ಕಾರಣಗಳಲ್ಲಿ ಇಂದಿನ ಕೇಂದ್ರ ಮತ್ತು ರಾಜ್ಯ ಹಣಕಾಸು ಸಂಬಂಧವೂ ಒಂದು ಅಥವಾ ವ್ಯವಸ್ಥೆ ಕೂಡ ಒಂದು ಎಂದು ನಾನು ಹೇಳಿದ್ದೇನೆ. ಇದನ್ನೇ ಒಂದು ನೆಪವೆಂದು ನಾನು ಎಂದೂ ಭಾವಿಸಿಲ್ಲ. ಯಾವುದೇ ಒಂದು ಪಕ್ಷ ಇಂದು ಸರಕಾರವನ್ನು ನಡೆಸುತ್ತಿದ್ದರೂ, ಅದು ಜನತಾ ಪಕ್ಷವೇ ಆಗಬೇಕೆಂದು ಹೇಳತಕ್ಕಂಥಾದ್ದು ಇಲ್ಲ ಕಾಂಗ್ರೆಸ್ ಆದರೂ ಕೂಡ ಆ ಸರಕಾರದ ಮುಖ್ಯ ಮಂತ್ರಿ ಮತ್ತು ಹಣಕಾಸಿನ ಮಂತ್ರಿ ಬಹಿರಂಗವಾಗಿ ಈ ವಿಚಾರವನ್ನು ಹೇಳದೇ ಇದ್ದರೂ ಖಾಸಗಿಯಾಗಿ ಈ ವಿಚಾರವನ್ನು ಒಪ್ಪಿಕೊಳ್ಳುತ್ತಾರೆ. ಇದು ೧೯೮೭-೮೮ನೇ ಇಸವಿಯಲ್ಲಿ ತಸು ಹೆಚ್ಚೂ ಕಡಿಮೆ ಪ್ರತಿಯೊಂದು ರಾಜ್ಯದ ಯೋಜನಾ ಗಾತ್ರದಲ್ಲಿ ಮಾಡಿರತಕ್ಕಂತಹ ಅಥವಾ ಆಗಿರತಕ್ಕಂತಹ ದೊಡ್ಡ ಪ್ರಮಾಣದ ಖೋತಾ. ಇದರಿಂದ ಆಗಿದೆ ಎಂದು ಸ್ಪಷ್ಟವಾಗುತ್ತದೆ ನಾನು ಒಂದೆರಡು ಉದಾಹರಣೆಗಳನ್ನು ನನ್ನ ಭಾಷಣದಲ್ಲಿ ಕೊಟ್ಟಿದ್ದೇನೆ. ನಾವು ೨೫೦ ರಿಂದ ೩೦೦ ಕೋಟಿ ರೂಪಾಯಿಯಷ್ಟು ಯೋಜನಾ